(5)

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ನಿರಾಣಿ ಹನುಮಂತ ರುದ್ರಪ್ಪ ಇವರು ನಿಯಮ-330 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

*****

**ಸೂಚನೆ:**

ಉತ್ತರ ಕರ್ನಾಟಕ ಸಮಗ್ರ ಅಭಿವೃದ್ಧಿ ಕುರಿತು ಮತ್ತು ಆ ಭಾಗದ ಪ್ರದೇಶಕ್ಕೆ ಅಸಮತೋಲನ ನಿವಾರಣೆಗೆ ಮಾರ್ಗೋಪಾಯಗಳನ್ನು ಕಂಡುಕೊಳ್ಳಲು ಸುದೀರ್ಘ ಚರ್ಚೆಗೆ ಅವಕಾಶ ನೀಡುವ ಕುರಿತು, ಈ ಭಾಗದ ನೀರಾವರಿ ಯೋಜನೆಗಳ ಅನುಷ್ಠಾನ, ಕೈಗಾರಿಕೆಗಳ ಸ್ಥಾಪನೆ, ಲಕ್ಷಾಂತರ ಯುವಕರಿಗೆ ಉದ್ಯೋಗ ಸೃಷ್ಟಿಗಾಗಿ ಇರುವ ಅವಕಾಶಗಳು, ಶಿಥಿಲಾವಸ್ಥೆಯಲ್ಲಿರುವ ಕನ್ನಡ ಶಾಲೆಗಳ ಪುನರ್ ನಿರ್ಮಾಣ, ವಿವಿಧ ಇಲಾಖೆಗಳಲ್ಲಿ ಇರುವ ಖಾಲಿ ಹುದ್ದೆಗಳ ನೇಮಕಾತಿ, ಮೂಲಭೂತ ಸೌಕರ್ಯ, ಪ್ರವಾಸೋದ್ಯಮಕ್ಕೆ ಉತ್ತೇಜನ, ಮಣ್ಣು ಮತ್ತು ನೀರಿನ ಸಂರಕ್ಷಣೆ; ಹೀಗೆ ಉತ್ತರ ಕರ್ನಾಟಕ ಭಾಗವು ಎದುರಿಸುತ್ತಿರುವ ಹಲವಾರು ಜ್ವಲಂತ ಸಮಸ್ಯೆಗಳ ಕುರಿತು ನಿಯಮ 330 ರಡಿಯಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

**ಕೈಗಾರಿಕೆಗಳ ಸ್ಥಾಪನೆ ಹಾಗೂ ಉದ್ಯೋಗ ಸೃಷ್ಟಿಗೆ ಸಂಬಂಧಿಸಿದಂತೆ ಉತ್ತರ:**

ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯು ಪ್ರತಿ 5 ವರ್ಷಗಳಿಗೊಮ್ಮೆ ಕೈಗಾರಿಕಾ ನೀತಿಯನ್ನು ಹೊರತರುತ್ತಿದ್ದು, ಪ್ರಸ್ತುತವಿರುವ 2025-30 ಕೈಗಾರಿಕಾ ನೀತಿಯು ರಾಜ್ಯದ ಸಮಗ್ರ ಅಭಿವೃದ್ಧಿ ಗುರಿಯೊಂದಿಗೆ ಉತ್ತರ ಕರ್ನಾಟಕ ಸಮಗ್ರ ಅಭಿವೃದ್ಧಿ ಮತ್ತು ಆ ಭಾಗದ ಪ್ರದೇಶಕ್ಕೆ ಅಸಮತೋಲನ ಹೋಗಲಾಡಿಸಲು ಬೆಂಗಳೂರಿನಿಂದ ಹೊರಗಡೆ ಕೈಗಾರಿಕಾ ಹಿಂದುಳಿದ ಪ್ರದೇಶವನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ. ಕೈಗಾರಿಕಾ ಬೆಳವಣಿಗೆಯ ಹಂತವನ್ನು ಆಧರಿಸಿ ಕರ್ನಾಟಕದ ವಿವಿಧ ಪ್ರದೇಶಗಳಿಗೆ ವಿಭಿನ್ನ ಪ್ರೋತ್ಸಾಹಗಳನ್ನು ನೀಡಲಾಗುತ್ತದೆ.

ಕೈಗಾರಿಕೆಯಲ್ಲಿ ಹಿಂದುಳಿದ ತಾಲ್ಲೂಕುಗಳಲ್ಲಿ ಹೂಡಿಕೆಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಈ ನೀತಿಯಲ್ಲಿ ರಾಜ್ಯದ ಜಿಲ್ಲೆಗಳನ್ನು ಮೂರು ವಲಯಗಳಾಗಿ ವರ್ಗೀಕರಿಸಿದೆ. ಕೈಗಾರಿಕೆಯಲ್ಲಿ ಹಿಂದುಳಿದ ತಾಲ್ಲೂಕುಗಳು/ಜಿಲ್ಲೆಗಳನ್ನು ವಲಯ-1 ಮತ್ತು ವಲಯ-2 ರಲ್ಲಿ ಹಾಗೂ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳನ್ನು ವಲಯ-3 ರಲ್ಲಿ ವರ್ಗೀಕರಿಸಲಾಗಿದೆ.

ಉತ್ತರ ಕರ್ನಾಟಕದ ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳನ್ನು ವಲಯ-1 ರಲ್ಲಿ ವರ್ಗೀಕರಿಸಿ, ಹೆಚ್ಚಿನ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ನೀಡಿ ಕೈಗಾರಿಕಾ ಸ್ಥಾಪನೆಗೆ ಉತ್ತೇಜಿಸಲಾಗುತ್ತಿದೆ.

**ಅಲ್ಲದೇ, ಹೆಚ್ಚುವರಿ ಪ್ರೋತ್ಸಾಹಧನವನ್ನು ಈ ಕೆಳಕಂಡಂತೆ ನೀಡಲಾಗುತ್ತಿದೆ:**

- ಡಾ. ನಂಜುಂಡಪ್ಪ ಸಮಿತಿ ವರದಿಯ ಪ್ರಕಾರ ಗುರುತಿಸಲಾದ ಅತ್ಯಂತ ಹಿಂದುಳಿದ ತಾಲ್ಲೂಕುಗಳಿಗೆ ಶೇ. 5 ರಷ್ಟು ಮತ್ತು ಹೆಚ್ಚು ಹಿಂದುಳಿದ ತಾಲ್ಲೂಕುಗಳಿಗೆ ಶೇ. 3 ರಷ್ಟು ಹೆಚ್ಚುವರಿ ಪ್ರೋತ್ಸಾಹಧನ.
- ಹೆಚ್ಚಿನ ಉದ್ಯೋಗ ನೀಡಿದ್ದಲ್ಲಿ ಹೆಚ್ಚುವರಿ ಪ್ರೋತ್ಸಾಹ ನೀಡಲಾಗುತ್ತದೆ.
- ಹೆಚ್ಚಿನ ಮಹಿಳೆಯರಿಗೆ ಉದ್ಯೋಗ ನೀಡಿದ್ದಲ್ಲಿ ಹೆಚ್ಚುವರಿ ಪ್ರೋತ್ಸಾಹ ನೀಡಲಾಗುತ್ತದೆ.
- R&D ಹಾಗೂ ಉತ್ಪಾದನಾ ಘಟಕಗಳು ಒಟ್ಟಿಗೆ ಸ್ಥಾಪನೆಯಾದಲ್ಲಿ ಹೆಚ್ಚುವರಿ ಪ್ರೋತ್ಸಾಹ ನೀಡಲಾಗುತ್ತದೆ.

ಕೈಗಾರಿಕಾ ನೀತಿ 2025-30 ರಡಿ ಪ್ರೋತ್ಸಾಹಕ ಮತ್ತು ಉತ್ತೇಜನಗಳನ್ನು ಪಡೆಯಲು ಗ್ರೂಪ್-ಡಿ ರಲ್ಲಿ ಶೇ. 100 ರಷ್ಟು ಒಟ್ಟಾರೆ ಶೇ. 70 ರಷ್ಟು ಉದ್ಯೋಗವಕಾಶಗಳನ್ನು ಸ್ಥಳೀಯರಿಗೆ ನೀಡಬೇಕಾಗಿರುತ್ತದೆ.

ಉತ್ತರ ಕರ್ನಾಟಕದಲ್ಲಿ 2020-21 ರಿಂದ ಇಲ್ಲಿಯವರೆಗೆ ರಾಜ್ಯಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿಗಳಲ್ಲಿ ಒಟ್ಟು 626 ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, ಇವುಗಳಿಂದ ರೂ.2,87,532 ಕೋಟಿ ಮೊತ್ತದ ಬಂಡವಾಳ ಹೂಡಿಕೆ ಆಗಲಿದ್ದು ಮತ್ತು 1,87,509 ಉದ್ಯೋಗಾವಕಾಶಗಳನ್ನು ನಿರೀಕ್ಷಿಸಲಾಗಿದೆ.

ಇವುಗಳ ಪೈಕಿ 76 ಯೋಜನೆಗಳು ಅನುಷ್ಠಾನಗೊಂಡಿದ್ದು, ಇವುಗಳಿಂದ ರೂ.47,034 ಕೋಟಿ ಮೊತ್ತದ ಬಂಡವಾಳ ಹೂಡಿಕೆಯಾಗಿದೆ ಹಾಗೂ 41,309 ಜನರಿಗೆ ಉದ್ಯೋಗ ಸೃಜನೆಯಾಗಿದೆ.

ಇವೆಲ್ಲವೂ ಬೃಹತ್ ಕೈಗಾರಿಕೆಗಳಾಗಿರುವುದರಿಂದ, ಅನುಷ್ಠಾನಕ್ಕೆ ಕನಿಷ್ಠ 3-5 ವರ್ಷಗಳು ಬೇಕಾಗಿದ್ದು, ಎಲ್ಲಾ ಯೋಜನೆಗಳು ಅನುಷ್ಠಾನಗೊಂಡ ನಂತರ ನಿರೀಕ್ಷೆಯಂತೆ ಉದ್ಯೋಗಗಳು ಸೃಷ್ಟಿಯಾಗುತ್ತವೆ.

ಅಲ್ಲದೆ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ MSME ಗಳಿಗೆ ಸಂಬಂಧಿಸಿದಂತೆ ಭಾರತ ಸರ್ಕಾರದ ಉದ್ಯಮ್ PORTAL ರಲ್ಲಿ ಉತ್ಪಾದನಾ ಮತ್ತು ಸೇವಾ ವಲಯದ ಒಟ್ಟು 5,20,632 ಘಟಕಗಳು ನೋಂದಣಿಯಾಗಿದ್ದು, 79,53,479 ಉದ್ಯೋಗ ಕಲ್ಪಿಸಲಾಗಿದೆ.

**ಸಂಖ್ಯೆ: ಸಿಐ 447 ಐಎಪಿ 2025**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ನಿರಾಣಿ ಹಣಮಂತ ರುದ್ರಪ್ಪ , ಇವರು ನಿಯಮ 330ರ ಅಡಿಯಲ್ಲಿ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಹೇಳಿಕೆ**

**ವಿಷಯ:** "ಉತ್ತರ ಕರ್ನಾಟಕ ಸಮಗ್ರ ಅಭಿವೃದ್ಧಿ ಕುರಿತು ಮತ್ತು ಆ ಭಾಗದ ಪ್ರದೇಶಕ್ಕೆ ಅಸಮತೋಲನ ನಿವಾರಣೆಗೆ ಮಾರ್ಗೋಪಾಯಗಳನ್ನು ಕಂಡುಕೊಳ್ಳಲು ಸುದೀರ್ಘ ಚರ್ಚೆಗೆ ಅವಕಾಶ ನೀಡುವ ಕುರಿತು, ಈ ಭಾಗದ ನೀರಾವರಿ ಯೋಜನೆಗಳನ್ನು ಅನುಷ್ಠಾನ, ಕೈಗಾರಿಕೆಗಳ ಸ್ಥಾಪನೆ, ಲಕ್ಷಾಂತರ ಯುವಕರಿಗೆ ಉದ್ಯೋಗ ಸೃಷ್ಟಿಗಾಗಿ ಇರುವ ಅವಕಾಶಗಳು, ಶಿಥಿಲಾವ್ಯಸ್ಥೆಯಲ್ಲಿರುವ ಕನ್ನಡ ಶಾಲೆಗಳು ಪುನರ್ ನಿರ್ಮಾಣ, ವಿವಿಧ ಇಲಾಖೆಗಳಲ್ಲಿ ಇರುವ ಖಾಲಿ ಹುದ್ದೆಗಳ ನೇಮಕಾತಿ, ಮೂಲಭೂತ ಸೌಕರ್ಯ, ಪ್ರವಾಸೋಧ್ಯಮಕ್ಕೆ ಉತ್ತೇಜನ, ಮಣ್ಣು ಮತ್ತು ನೀರಿನ ಸಂರಕ್ಷಣೆ ಹೀಗೆ ಉತ್ತರ ಕರ್ನಾಟಕ ಭಾಗವು ಎದುರಿಸುತ್ತಿರುವ ಹಲವಾರು ಜಲ್ವಂತ ಸಮಸ್ಯೆಗಳ ಕುರಿತು ನಿಯಮ 330 ರಡಿಯಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

******

**ಉತ್ತರ:-**

ರಾಜ್ಯ ಸರ್ಕಾರವು ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗಾಗಿ 2000ನೇ ಇಸವಿಯಲ್ಲಿ ಡಾ: ಡಿ.ಎಂ ನಂಜುಂಡಪ್ಪ ರವರ ಅಧ್ಯಕ್ಷತೆಯಲ್ಲಿ ಪ್ರಾದೇಶಿಕ ಅಸಮತೋಲನವನ್ನು ನಿವಾರಣೆ ಮಾಡಲು ಉನ್ನತಾಧಿಕಾರ ಸಮಿತಿಯನ್ನು ರಚಿಸಿತು. ಸದರಿ ಸಮಿತಿಯು ಜೂನ್-2002ರಲ್ಲಿ ಸರ್ಕಾರಕ್ಕೆ ವರದಿ ನೀಡಿತು. ಸದರಿ ವರದಿಯನ್ವಯ ರಾಜ್ಯದ 175 ತಾಲ್ಲೂಕುಗಳಲ್ಲಿ 114 ತಾಲ್ಲೂಕುಗಳು ಹಿಂದುಳಿದಿರುವಿಕೆಯನ್ನು ಗುರುತಿಸಿ ಇವುಗಳಲ್ಲಿ ಅತ್ಯಂತ ಹಿಂದುಳಿದ ತಾಲ್ಲೂಕುಗಳು 39, ಅತೀ ಹಿಂದುಳಿದ ತಾಲ್ಲೂಕುಗಳು 40, ಹಿಂದುಳಿದ ತಾಲ್ಲೂಕುಗಳು 35 ಎಂದು ವರದಿ ನೀಡಿತು. ಸದರಿ ವರದಿ ಪ್ರಕಾರ ಸಾಪೇಕ್ಷವಾಗಿ 61 ತಾಲ್ಲೂಕುಗಳು ಮುಂದುವರೆದಿದ್ದವು.

ಉತ್ತರ ಕರ್ನಾಟಕಕ್ಕೆ ಸೇರಿದಂತೆ ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಅತ್ಯಂತ ಹಿಂದುಳಿದ 22 ತಾಲ್ಲೂಕುಗಳಿದ್ದು, ಅತೀ ಹಿಂದುಳಿದ 05 ಹಾಗೂ ಹಿಂದುಳಿದ 02 ತಾಲ್ಲೂಕುಗಳಾಗಿರುತ್ತವೆ. ಸಾಪೇಕ್ಷವಾಗಿ ಅಭಿವೃದ್ಧಿ ಹೊಂದಿದ ತಾಲ್ಲೂಕುಗಳು 03 ಇರುತ್ತವೆ.

ಬೆಳಗಾವಿ ವಿಭಾಗದಲ್ಲಿ ಅತ್ಯಂತ ಹಿಂದುಳಿದ 05 ತಾಲ್ಲೂಕುಗಳಿದ್ದು, ಅತೀ ಹಿಂದುಳಿದ 12 ತಾಲ್ಲೂಕುಗಳಿದ್ದು ಹಾಗೂ ಹಿಂದುಳಿದ 14 ತಾಲ್ಲೂಕುಗಳಾಗಿರುತ್ತವೆ. ಸಾಪೇಕ್ಷವಾಗಿ ಅಭಿವೃದ್ಧಿ ಹೊಂದಿದ ತಾಲ್ಲೂಕುಗಳು 26 ಇರುತ್ತವೆ.

ಒಟ್ಟಾರೆ ಉತ್ತರ ಕರ್ನಾಟಕದಲ್ಲಿ 27 ಅತ್ಯಂತ ಹಿಂದುಳಿದ ತಾಲ್ಲೂಕುಗಳು, 17 ಅತೀ ಹಿಂದುಳಿದ ತಾಲ್ಲೂಕುಗಳು, 16 ಹಿಂದುಳಿದ ತಾಲ್ಲೂಕುಗಳಿದ್ದು, ಸಾಪೇಕ್ಷವಾಗಿ ಅಭಿವೃದ್ಧಿ ಹೊಂದಿದ 29 ತಾಲ್ಲೂಕುಗಳಾಗಿದ್ದು, ಒಟ್ಟಾರೆ 89 ತಾಲ್ಲೂಕುಗಳಲ್ಲಿ 29 ತಾಲ್ಲೂಕುಗಳು ಮಾತ್ರ ಅಭಿವೃದ್ಧಿ ಹೊಂದಿದ್ದು, ರಾಜ್ಯದ ಇತರೆ ಭಾಗಗಳಿಗೆ ಹೋಲಿಸಿದ್ದಲ್ಲಿ ಉತ್ತರ ಕರ್ನಾಟಕವು ನಿರ್ದಿಷ್ಟ ಪ್ರಮಾಣದಲ್ಲಿ ಅಭಿವೃದ್ಧಿಯಾಗದೇ ಇರುವುದು ಕಂಡು ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಡಾ: ಡಿ.ಎಂ ನಂಜುಂಡಪ್ಪರವರು ನೀಡಿರುವ ತನ್ನ ವರದಿಯಲ್ಲಿ ಕಲ್ಯಾಣ (ಹೈದ್ರಾಬಾದ್) ಕರ್ನಾಟಕ ಭಾಗಕ್ಕೆ ಶೇಕಡ 40ರಷ್ಟು, ಬೆಳಗಾವಿ ವಿಭಾಗಕ್ಕೆ ಶೇಕಡ 20ರಷ್ಟು, ಅಂದರೆ ಒಟ್ಟು ಉತ್ತರ ಕರ್ನಾಟಕ ಭಾಗಕ್ಕೆ ಶೇಕಡ 60ರಷ್ಟು ಅನುದಾನವನ್ನು ಹಂಚಿಕೆ ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

ಡಾ: ಡಿ.ಎಂ ನಂಜುಂಡಪ್ಪ ವರದಿಯ ಶಿಫಾರಸ್ಸಿನಂತೆ ರಾಜ್ಯ ಸರ್ಕಾರವು 2007-08ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯನ್ನು ಪ್ರಾರಂಭಿಸಿದ್ದು, ಈ ಯೋಜನೆಗೆ 2007-08 ರಿಂದ 2024-25ರವರೆವಿಗೆ ಡಾ: ಡಿ.ಎಂ ನಂಜುಂಡಪ್ಪ ವರದಿಯ ಶಿಫಾರಸ್ಸಿನಂತೆ ರೂ.48866.53/- ಕೋಟಿಗಳನ್ನು ಹಂಚಿಕೆ ಮಾಡಿದ್ದು, ರೂ.40159.43/- ಕೋಟಿಗಳನ್ನು ಬಿಡುಗಡೆ ಮಾಡಿದ್ದು, ರೂ.36866.60 /- ಕೋಟಿಗಳನ್ನು ವೆಚ್ಚ ಮಾಡಲಾಗಿದೆ. ವರ್ಷವಾರು ಮಾಹಿತಿಯನ್ನು **ಅನುಬಂಧ-1ರಲ್ಲಿ ನೀಡಲಾಗಿದೆ.**

ಕಲಬುರಗಿ ವಿಭಾಗಕ್ಕೆ ರೂ.15112.76 ಕೋಟಿಗಳನ್ನು ಹಂಚಿಕೆ ಮಾಡಿದ್ದು, ರೂ.12856.20 ಕೋಟಿಗಳು ಬಿಡುಗಡೆಯಾಗಿದ್ದು, ರೂ.11629.58 ಕೋಟಿಗಳು ವೆಚ್ಚವಾಗಿರುತ್ತದೆ. ಬೆಳಗಾವಿ ವಿಭಾಗಕ್ಕೆ ರೂ.7925.02 ಕೋಟಿಗಳನ್ನು ಹಂಚಿಕೆ ಮಾಡಿದ್ದು, ರೂ.6676.95 ಕೋಟಿಗಳು ಬಿಡುಗಡೆಯಾಗಿ, ರೂ.6080.70 ಕೋಟಿಗಳು ವೆಚ್ಚವಾಗಿರುತ್ತದೆ, ಒಟ್ಟಾರೆ ಉತ್ತರ ಕರ್ನಾಟಕಕ್ಕೆ ರೂ.23037.77 ಕೋಟಿಗಳು ಹಂಚಿಕೆ ಮಾಡಿದ್ದು, ರೂ.19533.15 ಕೋಟಿಗಳು ಬಿಡುಗಡೆಯಾಗಿ, ರೂ.17710.28 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

ಡಾ: ಡಿ.ಎಂ ನಂಜುಂಡಪ್ಪ ವರದಿಯಾನುಸಾರ ಉತ್ತರಕರ್ನಾಟಕದ ಸಮಗ್ರ ಅಭಿವೃದ್ಧಿಗಾಗಿ ಇಲಾಖಾವಾರು ಯೋಜನೆ/ಕಾರ್ಯಕ್ರಮಗಳಿಗೆ ಆಯವ್ಯಯದಲ್ಲಿ ಈ ಕೆಳಕಂಡಂತೆ ಹಂಚಿಕೆಯಾಗಿದ್ದು ಈ ಪೈಕಿ ಉತ್ತರಕರ್ನಾಟಕಕ್ಕೆ ಡಾ. ನಂಜುಂಡಪ್ಪ ವರದಿಯ ಶಿಫಾರಸ್ಸಿನಂತೆ ಶೇಕಡ 60ರಷ್ಟು ಹಂಚಿಕೆ ಮಾಡಿ ಯೋಜನೆ/ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ. (ಇಲಾಖಾವಾರು ಕೈಗೊಂಡ ಯೋಜನೆ/ಕಾರ್ಯಕ್ರಮಗಳ ವಿವರಗಳನ್ನುಅನುಬಂಧ-**2**ರಲ್ಲಿ ನೀಡಲಾಗಿದೆ). ಕ್ರಮ ವಹಿಸಲಾಗಿದೆ.

| ಕ್ರ. ಸಂ. | ಇಲಾಖೆ | 2007-08 & 2024-25 (ಮಾರ್ಚ್) ಒಟ್ಟು | | | | |
|---|---|---|---|---|---|---|
| | | ನಿಗದಿ | ಬಿಡುಗಡೆ | ವೆಚ್ಚ | % ಒಟ್ಟು ಅನುದಾನಕ್ಕೆ ವೆಚ್ಚ | % ಒಟ್ಟು ಬಿಡುಗಡೆಗೆ ವೆಚ್ಚ |
| 1 | ಕೃಷಿ | 1791.17 | 1321.68 | 1289.59 | 72.00 | 97.57 |
| 2 | ಒಳಾಡಳಿತ | 183.73 | 170.06 | 174.00 | 94.70 | 102.32 |
| 3 | ತೋಟಗಾರಿಕೆ | 469.03 | 411.67 | 399.83 | 85.25 | 97.12 |
| 4 | ಪಶುಸಂಗೋಪನೆ | 158.69 | 61.60 | 62.21 | 39.20 | 100.99 |

| ಕ್ರ. ಸಂ. | ಇಲಾಖೆ | 2007-08 & 2024-25 (ಮಾರ್ಚ್) ಒಟ್ಟು | | | | |
|---|---|---|---|---|---|---|
| | | ನಿಗದಿ | ಬಿಡುಗಡೆ | ವೆಚ್ಚ | % ಒಟ್ಟು ಅನುದಾನಕ್ಕೆ ವೆಚ್ಚ | % ಒಟ್ಟು ಬಿಡುಗಡೆಗೆ ವೆಚ್ಚ |
| 5 | ಅರಣ್ಯ | 80.75 | 80.00 | 79.51 | 98.46 | 99.39 |
| 6 | ಲೋಕೋಪಯೋಗಿ | 2999.57 | 2706.82 | 2493.21 | 83.12 | 92.11 |
| 7 | ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ | 10363.66 | 7899.30 | 6870.19 | 66.29 | 86.97 |
| 8 | ವಸತಿ | 4785.36 | 4299.53 | 4280.53 | 89.45 | 99.56 |
| 9 | ಜಲಸಂಪನ್ಮೂಲ | 8037.09 | 7170.83 | 6761.57 | 84.13 | 94.29 |
| 10 | ಸಣ್ಣ ನೀರಾವರಿ | 441.47 | 367.52 | 364.41 | 82.54 | 99.15 |
| 11 | ಇಂಧನ | 2129.02 | 1708.46 | 1580.02 | 74.21 | 92.48 |
| 12 | ವಾಣಿಜ್ಯ ಮತ್ತು ಕೈಗಾರಿಕೆ | 342.71 | 140.35 | 126.20 | 36.82 | 89.92 |
| 13 | ಸಾರಿಗೆ | 1312.89 | 1200.33 | 1126.11 | 85.77 | 93.82 |
| 14 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 3148.40 | 2893.52 | 2881.83 | 91.53 | 99.60 |
| 15 | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ | 3294.56 | 2583.52 | 2430.00 | 73.76 | 94.06 |
| 16 | ಉನ್ನತ ಶಿಕ್ಷಣ | 570.60 | 505.38 | 505.38 | 88.57 | 100.00 |
| 17 | ಕಾರ್ಮಿಕ | 336.61 | 250.37 | 194.35 | 57.74 | 77.63 |
| 18 | ಸಮಾಜ ಕಲ್ಯಾಣ | 1548.95 | 1086.03 | 820.38 | 52.96 | 75.54 |
| 19 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 1047.29 | 565.05 | 541.79 | 51.73 | 95.88 |
| 20 | ಪ್ರವಾಸೋದ್ಯಮ | 603.98 | 549.01 | 548.03 | 90.74 | 99.82 |
| 21 | ನಗಾರಾಭಿವೃದ್ಧಿ | 806.00 | 294.13 | 294.13 | 36.49 | 100.00 |
| 22 | ಮೂಲಸೌಲಭ್ಯ | 1768.61 | 1289.42 | 1271.51 | 71.89 | 98.61 |
| 23 | ಮಾಹಿತಿ ಮತ್ತು ತಂತ್ರಜ್ಞಾನ | 78.40 | 77.22 | 56.72 | 72.35 | 73.45 |
| 24 | ಹಿಂದುಳಿದ ವರ್ಗಗಳ ಕಲ್ಯಾಣ | 620.90 | 583.22 | 530.26 | 85.40 | 90.92 |
| 25 | ಸಹಕಾರ | 23.16 | 22.66 | 22.61 | 97.63 | 99.78 |
| 26 | ಕೌಶಲ್ಯಾಭಿವೃದ್ಧಿ | 301.11 | 298.93 | 274.70 | 91.23 | 91.89 |
| 27 | ಅಲ್ಪಸಂಖ್ಯಾತರ | 405.00 | 405.00 | 405.00 | 100.00 | 100.00 |
| 28 | ಕಲ್ಯಾಣ ಪ್ರದೇಶಾಭಿವೃದ್ಧಿ ಮಂಡಳಿ | 1217.81 | 1217.81 | 482.49 | 39.62 | 39.62 |
| | ಒಟ್ಟು | 48866.52 | 40159.42 | 36866.56 | 75.44 | 91.80 |

(ನಿಗದಿ, ಬಿಡುಗಡೆ ವೆಚ್ಚ ಆರಂಭಿಕ ಶಿಲ್ಕನ್ನು ಒಳಗೊಂಡಿರುತ್ತದೆ)

ಉತ್ತರ ಕರ್ನಾಟಕಕ್ಕೆ ಡಾ: ಡಿ.ಎಂ ನಂಜುಂಡಪ್ಪ ವರದಿಯನ್ವಯ ಈವರೆವಿಗೆ ರೂ. 17710.28 ಕೋಟಿಗಳನ್ನ1 ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ರೂ.13488.45 ಕೋಟಿಗಳು ಸೇರಿದಂತೆ ವಿಶೇಷ ಅಭಿವೃದ್ಧಿ ಯೋಜನೆ ಮತ್ತು ಮಂಡಳಿಯಿಂದ ಒಟ್ಟು ರೂ.31,198.73 ಕೋಟಿಗಳನ್ನು ವೆಚ್ಚ ಮಾಡುವುದರ ಮೂಲಕ ಉತ್ತರ ಕರ್ನಾಟಕದಲ್ಲಿ ಶೈಕ್ಷಣಿಕ ಸೌಲತ್ತುಗಳಲ್ಲಿ ಅಭಿವೃದ್ಧಿ, ರಸ್ತೆ ಮತ್ತು ಸೇತುವೆಗಳು ಸೇರಿದಂತೆ ಮೂಲಸೌಕರ್ಯ, ಸಾಮಾಜಿಕ ಕ್ಷೇತ್ರಗಳಲ್ಲಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹಾಸ್ಟೆಲ್ ಮತ್ತು ವಸತಿ ನಿಲಯಗಳ ನಿರ್ಮಾಣ, ಕೈಗಾರಿಕಾ ವಲಯಗಳ ಅಭಿವೃದ್ಧಿ ಮೂಲಕ ಆರ್ಥಿಕ ವಿಕಾಸ ಮತ್ತು ಕೈಗಾರಿಕೀಕರಣ ಹಾಗೂ ಉದ್ಯೋಗಾವಕಾಶಗಳ ಸೃಜನೆ, ಆರೋಗ್ಯ ಕ್ಷೇತ್ರದಲ್ಲಿ PHC, CHC ತಾಲ್ಲೂಕು ಆಸ್ಪತ್ರೆಗಳು ಮತ್ತು

ಜಿಲ್ಲಾಸ್ಪತ್ರೆಗಳು, ಜಯದೇವ ಹೃದ್ರೋಗ ಆಸ್ಪತ್ರೆ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಪ್ರಾದೇಶಿಕ ಅಸಮತೋಲನೆಯನ್ನು ನಿವಾರಣೆ ಮಾಡಲು ರಾಜ್ಯ ಸರ್ಕಾರವು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಪ್ರತಿ ವರ್ಷ ರೂ.5000.00ಕೋಟಿಗಳನ್ನು ನೀಡುವುದರ ಮೂಲಕ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಪೂರಕವಾದಂತಹ ಎಲ್ಲಾ ಸಹಕಾರವನ್ನು ನೀಡಲಾಗುತ್ತಿದೆ.

ಪ್ರಸ್ತುತ ರಾಜ್ಯ ಸರ್ಕಾರವು ಡಾ: ಡಿ.ಎಂ ನಂಜುಂಡಪ್ಪ ವರದಿಯ ಸೂಚ್ಯಾಂಕಗಳು 22 ವರ್ಷಗಳಷ್ಟು ಹಳೆಯಾದಾಗಿರುವುದರಿಂದ ಹಾಗೂ ಕೆಲವು ಸೂಚ್ಯಾಂಕಗಳು ಮಹತ್ವ ಕಳೆದುಕೊಂಡಿರುವುದರಿಂದ ಹೊಸ ಅಭಿವೃದ್ಧಿ ಸೂಚ್ಯಾಂಕಗಳನ್ನು ಕಂಡು ಹಿಡಿಯಲು ಪ್ರೊ. ಎಂ ಗೋವಿಂದರಾವ್, ಆರ್ಥಿಕ ತಜ್ಞರು ಇವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯು ನೀಡುವ ಶಿಫಾರಸ್ಸುಗಳನ್ನು ಆಧರಿಸಿ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಬೇಕಾದ ಪೂರಕ ಯೋಜನೆಗಳನ್ನು ರೂಪಿಸಲು ಕ್ರಮವಹಿಸಲಾಗುತ್ತದೆ ಎಂಬ ಅಂಶವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ

**(ಡಿ. ಸುಧಾರಕ್)**
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ ಸಚಿವರು.

ಅನುಬಂಧ–1

| 2007–08ನೇ ಸಾಲಿನಿಂದ 2024–25ರವರೆಗೆ ವಿಶೇಷ ಅಭಿವೃದ್ಧಿ ಯೋಜನೆಯಡಿ ನಿಗದಿ, ಬಿಡುಗಡೆ ಹಾಗು ವೆಚ್ಚವಾಗಿರುವ ಅನುದಾನ (ರೂ.ಕೋಟಿಗಳಲ್ಲಿ) | | | | | | | | |
|---|---|---|---|---|---|---|---|---|
| ವರ್ಷ | ಆಯವ್ಯಯದಲ್ಲಿ ನಿಗದಿ | ಪ್ರಾರಂಭಿಕ ಶಿಲ್ಕು | ಪೂರಕ ಅಂದಾಜು | ಒಟ್ಟು ಅನುದಾನ | ಬಿಡುಗಡೆ | ವೆಚ್ಚ | ಒಟ್ಟು ಅನುದಾನಕ್ಕೆ ವೆಚ್ಚ ಶೇಕಡವಾರು | ಒಟ್ಟು ಬಿಡುಗಡೆಗೆ ವೆಚ್ಚ ಶೇಕಡವಾರು |
| 2007-08 | 1571.50 | 0.00 | 0.00 | 1571.50 | 827.93 | 804.48 | 51.19 | 97.17 |
| 2008-09 | 2547.34 | 0.00 | 0.00 | 2547.34 | 1369.26 | 1153.94 | 45.30 | 84.27 |
| 2009-10 | 2573.83 | 0.00 | 0.00 | 2573.83 | 1731.12 | 1543.11 | 59.95 | 89.14 |
| 2010-11 | 2584.00 | 0.00 | 0.00 | 2584.00 | 1924.47 | 1762.54 | 68.21 | 91.59 |
| 2011-12 | 2975.64 | 0.00 | 0.00 | 2975.64 | 2529.99 | 2200.16 | 73.94 | 86.96 |
| 2012-13 | 2680.00 | 0.00 | 0.00 | 2680.00 | 2464.83 | 2402.92 | 89.66 | 97.49 |
| 2013-14 | 2925.60 | 0.00 | 0.00 | 2925.60 | 2053.63 | 2053.63 | 70.20 | 100.00 |
| 2014-15 | 1228.48 | 0.00 | 0.00 | 1228.48 | 1223.78 | 1212.73 | 98.72 | 99.10 |
| 2015-16 | 2300.02 | 0.00 | 0.00 | 2300.02 | 1967.49 | 1805.42 | 78.50 | 91.76 |
| 2016-17 | 3000.00 | 0.00 | 0.00 | 3000.00 | 2755.94 | 2495.49 | 83.18 | 90.55 |
| 2017-18 | 2967.00 | 243.68 | 13.75 | 3224.43 | 2650.06 | 2312.64 | 71.72 | 87.27 |
| 2018-19 | 3007.00 | 502.05 | -26.80 | 3482.25 | 2580.09 | 2460.48 | 70.66 | 95.36 |
| 2019-20 | 3010.02 | 346.11 | 41.18 | 3397.31 | 3253.16 | 3154.49 | 92.85 | 96.97 |
| 2020-21 | 2413.30 | 38.33 | 0.00 | 2451.63 | 2297.22 | 2290.73 | 93.44 | 99.72 |
| 2021-22 | 3266.16 | 131.72 | | 3397.88 | 3204.90 | 2880.72 | 84.78 | 89.88 |
| 2022-23 | 2688.38 | 425.67 | | 3114.05 | 2546.38 | 2076.76 | 66.69 | 81.56 |
| 2023-24 | 2335.54 | | | 2335.54 | 2281.39 | 1770.77 | 75.82 | 77.62 |
| 2024-25 | 3076.99 | | | 3076.99 | 2497.78 | 2485.54 | 80.78 | 99.51 |
| **ಒಟ್ಟು** | **47150.80** | **1687.56** | **28.13** | **48866.49** | **40159.4** | **36866.56** | **75.44** | **91.80** |

ಅನುಬಂಧ–2

ನಂಜುಂಡಪ್ಪ ವರದಿಯ ಶಿಫಾರಸ್ಸಿನಂತೆ, ಅನುಷ್ಠಾನಗೊಂಡ ಪ್ರಮುಖ ಯೋಜನೆ/ಕಾರ್ಯಕ್ರಮಗಳ ವಿವರಗಳು

- ಕಲಬುರಗಿಯಲ್ಲಿ ಕೇಂದ್ರೀಯ ವಿಶ್ವವಿದ್ಯಾಲಯ ಸ್ಥಾಪನೆ ಮಾಡಲಾಗಿದೆ.
- ಧಾರವಾಡ ಮತ್ತು ಕಲಬುರಗಿಗಳಲ್ಲಿ ಉಚ್ಛ ನ್ಯಾಯಾಲಯ ಪೀಠಗಳ ಸ್ಥಾಪನೆ ಮಾಡಲಾಗಿದೆ.
- ವಿಜಯಪುರದಲ್ಲಿ ಮಹಿಳಾ ವಿಶ್ವವಿದ್ಯಾಲಯ ಸ್ಥಾಪನೆಯಾಗಿದೆ.
- ಕಲಬುರಗಿ ಮತ್ತು ಹುಬ್ಬಳ್ಳಿಯಲ್ಲಿ ಮಾಹಿತಿ ತಂತ್ರಜ್ಞಾನ ಪಾರ್ಕ್ (ಐಟಿ ಪಾರ್ಕ್)ನ್ನು ಸ್ಥಾಪನೆ ಮಾಡಲಾಗಿದೆ.
- ಕಲಬುರಗಿಯಲ್ಲಿ ಫುಡ್ ಪಾರ್ಕ್ ಸ್ಥಾಪನೆ ಮಾಡಲಾಗಿದೆ.
- ಕಲಬುರಗಿಯಲ್ಲಿ ಜವಳಿ ಪಾರ್ಕ್ ಸ್ಥಾಪನೆ ಕೆಲಸ ಪ್ರಗತಿಯಲ್ಲಿದೆ.
- ಕಲಬುರಗಿಯಲ್ಲಿ ವಿಮಾನ ನಿಲ್ದಾಣವನ್ನು ಸ್ಥಾಪನೆ ಮಾಡಲಾಗಿದೆ.
- ಬೀದರ್ ಜಿಲ್ಲೆಯಲ್ಲಿಯೂ ಸಹ ವಿಮಾಣ ನಿಲ್ದಾಣ ಸ್ಥಾಪನೆಯಾಗಿದೆ ಹಾಗೂ 2024–25ನೇ ಸಾಲಿನಲ್ಲಿ ರೂ.18.00 ಕೋಟಿ ನೀಡಲಾಗಿದೆ.
- ಹೊಸ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ರಾಯಚೂರು, ಬೆಳಗಾವಿ ಮತ್ತು ಬೀದರನಲ್ಲಿ ಸ್ಥಾಪನೆ ಮಾಡಲಾಗಿದೆ.
- ಧಾರವಾಡದಲ್ಲಿ ಮಾನಸಿಕ ರೋಗಿಗಳ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲಾಗಿದೆ.
- ಹೊಸದಾಗಿ 38 ಸುಟ್ಟಗಾಯಗಳ ಮತ್ತು ಡಯಾಲಿಸಿಸ್ ವಾರ್ಡ್‌ಗಳನ್ನು ತೆರೆಯಲಾಗಿದೆ.
- ಬಾಗಲಕೋಟೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯ ಹಾಗೂ ಬೀದರನಲ್ಲಿ ತೋಟಗಾರಿಕೆ ಕಾಲೇಜನ್ನು ಸ್ಥಾಪನೆ ಮಾಡಲಾಗಿದೆ.
- ಉತ್ತರ ಕರ್ನಾಟಕದ ಅರಬಾವಿ ಗೋಕಾಕ್ ಜಿಲ್ಲೆ, ಮುನಿರಾಬಾದ್ ಕೊಪ್ಪಳ ಜಿಲ್ಲೆ, ಬೀದರ್, ಬಾಗಲಕೋಟೆ, ಹಾವೇರಿ ಮತ್ತು ಶಿರಸಿಯಲ್ಲಿ ತೋಟಗಾರಿಕೆ ಕಾಲೇಜುಗಳನ್ನು ಸ್ಥಾಪಿಸಲಾಗಿದೆ.
- ತೋಟಗಾರಿಕೆ ಸೇವಾ ಕೇಂದ್ರಗಳನ್ನು ಕಲಬುರ್ಗಿ, ರಾಯಚೂರು, ಬಿಜಾಪುರ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಸ್ಥಾಪಿಸಲಾಗಿದೆ.
- ಕೃಷಿ ಬೆಲೆಯನ್ನು ಬೆಂಬಲಿಸಲು ಆವರ್ತಕ ನಿಧಿಯನ್ನು ಸ್ಥಾಪನೆ ಮಾಡಲಾಗಿದೆ.
- ಹುಬ್ಬಳ್ಳಿ–ಮುಂಬೈ ವಿಮಾನಯಾನ ಸಾರ್ವಜನಿಕ ಸೇವೆಗೆ ಮುಕ್ತವಾಗಿದೆ.
- ಬೀದರನಲ್ಲಿ ಕರ್ನಾಟಕ ಪಶುವೈದ್ಯ ಮತ್ತು ಮೀನುಗಾರಿಕೆ ವಿಜ್ಞಾನ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಲಾಗಿದೆ.
- ಕಲಬುರಗಿಯಲ್ಲಿ ಹೈನುಗಾರಿಕೆ ವಿಜ್ಞಾನ ಕಾಲೇಜನ್ನು ಸ್ಥಾಪಿಸಲಾಗಿದೆ.

- ಎಲ್ಲಾ ಅತೀ ಹಿಂದುಳಿದ ತಾಲ್ಲೂಕುಗಳಲ್ಲಿ ಕಸ್ತೂರ ಬಾ ಗಾಂಧಿ ಬಾಲಕಿಯರ ಶಾಲೆಗಳನ್ನು ಸ್ಥಾಪಿಸಲಾಗಿದೆ.
- ಜಿಲ್ಲಾ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ವಾರ್ಡ್‌ಗಳನ್ನು ಸ್ಥಾಪಿಸಲಾಗಿದೆ.
- ಬೀದರ್-ಕಲಬುರಗಿ ರೈಲು ಮಾರ್ಗ, ಸಾರ್ವಜನಿಕ ಸೇವೆಗೆ ಮುಕ್ತವಾಗಿದೆ.
- ರೈತ ತರಬೇತಿ ಕೇಂದ್ರಗಳನ್ನು ಕೃಷಿ ಇಲಾಖಾ ವತಿಯಿಂದ ಸ್ಥಾಪಿಸಲಾಗಿರುತ್ತದೆ.
- ಹೊಸ ಪಶುಪಾಲನ ಕೇಂದ್ರಗಳು ಸ್ಥಾಪನೆಯಾಗಿರುತ್ತವೆ.
- ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯವುಳ್ಳ ಎಪಿಎಂಸಿ ಮಾರುಕಟ್ಟೆಗಳನ್ನು ಸ್ಥಾಪಿಸಲಾಗಿರುತ್ತದೆ.
- ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ವತಿಯಿಂದ ಮನೆಗಳನ್ನು ನಿರ್ಮಿಸಲಾಗಿರುತ್ತದೆ ಹಾಗೂ ಸೈಟುಗಳನ್ನು ವಿತರಣೆ ಮಾಡಲಾಗಿದೆ.
- 6 ಹೊಸ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಹಾಸನ, ಮಂಡ್ಯ, ಶಿವಮೊಗ್ಗ, ರಾಯಚೂರು, ಬೆಳಗಾವಿ ಮತ್ತು ಬೀದರನಲ್ಲಿ ಸ್ಥಾಪನೆ ಮಾಡಲಾಗಿದೆ.
- ರಾಜ್ಯದಲ್ಲಿ 53 ಮೆಡಿಕಲ್ ಕಾಲೇಜುಗಳು ಕಾರ್ಯ ನಿರ್ವಹಿಸುತ್ತಿದ್ದು, ಖಾಸಗಿ ಅಥವಾ ಸರ್ಕಾರಿ ಕಾಲೇಜುಗಳು ಇಲ್ಲದಿರುವ ಜಿಲ್ಲೆಗಳೆಂದರೆ ಹಾವೇರಿ, ಯಾದಗಿರಿ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಜಿಲ್ಲಾ ಆಸ್ಪತ್ರೆಗಳನ್ನು ಉನ್ನತೀಕರಿಸಲು ಭೂಮಿಯನ್ನು ಗುರುತಿಸಿದ್ದು, ಈ ಜಿಲ್ಲೆಗಳಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಆದ್ಯತೆಯ ಮೇಲೆ ಸ್ಥಾಪಿಸಲಾಗಿದೆ.
- ರಾಜ್ಯದ 28 ಜಿಲ್ಲೆಗಳಲ್ಲಿ 86 ತಾಲ್ಲೂಕುಗಳಲ್ಲಿ ಕರ್ನಾಟಕ ಕಸ್ತೂರ ಬಾ ಗಾಂಧಿ ವಿದ್ಯಾರ್ಥಿನಿಲಯ ನಿರ್ವಹಣೆ(ಕೆಕೆಜಿಬಿವಿ) 24 ಬಾಡಿಗೆ ಸಹಿತ ಹಾಗೂ 62 ಬಾಡಿಗೆ ರಹಿತ ಕಟ್ಟಡಗಳಿಗೆ ಒಟ್ಟು 86 ಕೆಕೆಜಿಬಿವಿಗಳಿಗೆ ಅನುದಾನ ಒದಗಿಸಲಾಗುತ್ತಿದೆ.
- ಒಟ್ಟು 23 ಜಿಲ್ಲಾ ಆಸ್ಪತ್ರೆಗಳಲ್ಲಿ ಹಾಗೂ 34 ತಾಲ್ಲೂಕು ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ವಾರ್ಡ್‌ಗಳನ್ನು ಸ್ಥಾಪಿಸಲಾಗಿದೆ.
- ಬೀದರ್-ಕಲಬುರಗಿ ರೈಲು ಮಾರ್ಗ, ಸಾರ್ವಜನಿಕ ಸೇವೆಗೆ ಮುಕ್ತವಾಗಿದೆ.
- ಕೊಡಗು ಜಿಲ್ಲೆಯಲ್ಲಿ ಸೈನಿಕ ತರಬೇತಿ ಶಾಲೆ ಪ್ರಾರಂಭವಾಗಿರುತ್ತದೆ.
- 49 ರೈತ ತರಬೇತಿ ಕೇಂದ್ರಗಳನ್ನು ಕೃಷಿ ಇಲಾಖಾ ವತಿಯಿಂದ ಸ್ಥಾಪಿಸಲಾಗಿರುತ್ತದೆ.
- 172 ಹೊಸ ಪಶುಪಾಲನ ಕೇಂದ್ರಗಳು ಸ್ಥಾಪನೆಯಾಗಿರುತ್ತವೆ.
- 162 ತಾಲ್ಲೂಕುಗಳಲ್ಲಿ, ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯವುಳ್ಳ ಎಪಿಎಂಸಿ ಮಾರುಕಟ್ಟೆಗಳನ್ನು ಸ್ಥಾಪಿಸಲಾಗಿದೆ.
- ಮೈಸೂರಿನಿಂದ ಚೆನ್ನೈಗೆ ವಿಮಾನಯಾನ ಸಾರ್ವಜನಿಕ ಸೇವೆಗೆ ಮುಕ್ತವಾಗಿದೆ.
- 39 ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಶಿಕ್ಷಕರ ವಸತಿ ಗೃಹ, ಕ್ಲಸ್ಟರ್ ಕಾಂಪ್ಲೆಕ್ಸ್ ನಿರ್ಮಿಸಿದೆ.

# ಪೂರಕ ಟಿಪ್ಪಣಿ

## ಮಾನ್ಯ ವಿಧಾನ ಪರಿಷತ್ತಿನ ಸಭಾಪತಿಗಳು ಅಂಗೀಕರಿಸಿರುವ ಶ್ರೀ ನಿರಾಣಿ ಹನುಮಂತ ರುದ್ರಪ್ಪ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ಇವರ ನಿಯಮ 330 ರಡಿ ನೀಡಿರುವ ಗಮನ ಸೆಳೆಯುವ ಸೂಚನೆ

ಕರ್ನಾಟಕ ರಾಜ್ಯದಲ್ಲಿನ ಕೆಲವೊಂದು ಪ್ರದೇಶಗಳು ಉತ್ತಮ ಅಭಿವೃದ್ಧಿ ಹೊಂದಿ, ಕೆಲವೊಂದು ಪ್ರದೇಶಗಳು ಅಭಿವೃದ್ಧಿಯಲ್ಲಿ ಹಿಂದುಳಿದಿದ್ದವು. ಅಭಿವೃದ್ಧಿಯಲ್ಲಿನ ಅಸಮತೋಲನ ನಿವಾರಣೆ ಮತ್ತು ಸಂತುಲಿತ ಅಭಿವೃದ್ಧಿಯತ್ತ ಹೆಜ್ಜೆ ಹಾಕಲು ಇರುವ ಕಾರ್ಯವಿಧಾನದ ಅನುಷ್ಠಾನಕ್ಕಾಗಿ ಸಾಂಸ್ಥಿಕ ಕಾರ್ಯತಂತ್ರವನ್ನು ಸೂಚಿಸುವುದು ಹಾಗೂ ಜಿಲ್ಲೆ ಜಿಲ್ಲೆಗಳ ನಡುವೆ, ಪ್ರದೇಶಗಳ ನಡುವೆ ಉತ್ತರ ಮತ್ತು ದಕ್ಷಿಣ ಕರ್ನಾಟಕಗಳ ನಡುವೆ ಇರುವ ಅಸಮಾನತೆಯನ್ನು ಅಧ್ಯಯನ ಮಾಡಿ ಜಿಲ್ಲೆಗಳ ನಡುವಣ, ಪ್ರದೇಶಗಳ ನಡುವಣ ಅಸಮಾನತೆಯನ್ನು ತಗ್ಗಿಸಲು ಸೂಕ್ತ ಅಭಿವೃದ್ಧಿ ವಿಧಾನವನ್ನು ಶಿಫಾರಸ್ಸು ಮಾಡಲು 2000ನೇ ವರ್ಷದ ಅಕ್ಟೋಬರ್‌ನಲ್ಲಿ ಡಾ:ಡಿ.ಎಂ.ನಂಜಂಡುಪ್ಪನವರ ಅಧ್ಯಕ್ಷತೆಯಲ್ಲಿ ಪ್ರಾದೇಶಿಕ ಅಸಮತೋಲನ ನಿವಾರಣಾ ಉನ್ನತಾಧಿಕಾರ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯು ಒಂದು ಸಮಗ್ರ ಮತ್ತು ವೈಜ್ಞಾನಿಕ ವಿಧಾನವನ್ನು ಅನುಸರಿಸಿ ವರದಿಯನ್ನು ಜೂನ್–2002ರಲ್ಲಿ ನೀಡಿದೆ.

ಹಿಂದುಳಿದ ತಾಲ್ಲೂಕುಗಳನ್ನು ಗುರುತಿಸುವ ಸಲುವಾಗಿ ತಾಲ್ಲೂಕು ಹಂತದಲ್ಲಿ "ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚಿ"ಗಳನ್ನು (ಸಿಸಿಡಿಐ) ರಚಿಸಲಾಯಿತು. ಇದಕ್ಕಾಗಿ ಕೃಷಿ ಹಾಗೂ ತತ್ಸಂಬಂಧಿ ವಲಯದಲ್ಲಿ 9 ಸೂಚಕಗಳನ್ನು, ಉದ್ದಿಮೆ, ವ್ಯಾಪಾರ ಹಾಗೂ ಹಣಕಾಸು ವಲಯದಲ್ಲಿ 5 ಸೂಚಕಗಳನ್ನು ಮೂಲಭೂತ ಸೌಕರ್ಯ (ಆರ್ಥಿಕ) ವಲಯದಲ್ಲಿ 9 ಸೂಚಕಗಳನ್ನು, ಮೂಲಭೂತ ಸೌಕರ್ಯ (ಸಾಮಾಜಿಕ) ವಲಯದಲ್ಲಿ 7 ಸೂಚಕಗಳನ್ನು ಮತ್ತು ಜನಸಂಖ್ಯಾ ವೈಶಿಷ್ಟ್ಯಗಳ ವಲಯದಲ್ಲಿ 5 ಸೂಚಕಗಳನ್ನು ಹೀಗೆ 5 ವಲಯಗಳಿಗೆ ಅನ್ವಯಿಸುವ 35 ಸೂಚಕಗಳನ್ನು ಬಳಸಿ, ಪ್ರತಿಯೊಂದು ಸೂಚಕಕ್ಕೂ ಅದಕ್ಕೆ ತಕ್ಕ ತೂಕವನ್ನು ನಿಗದಿಪಡಿಸಿ ಅಭಿವೃದ್ಧಿ ಸೂಚಿಗಳನ್ನು ಕಂಡುಹಿಡಿದು, ಸಿಸಿಡಿಐ ಮೌಲ್ಯ '1' ಕ್ಕಿಂತ (ರಾಜ್ಯ ಸರಾಸರಿ) ಕಡಿಮೆಯಿರುವ 114 ತಾಲ್ಲೂಕುಗಳನ್ನು ಹಿಂದುಳಿದ ತಾಲ್ಲೂಕುಗಳೆಂದು ಗುರುತಿಸಲಾಯಿತು.

**114 ತಾಲ್ಲೂಕುಗಳ ವರ್ಗೀಕೃತ ವಿಭಾಗಾವಾರು ಅಂಕಿ ಅಂಶಗಳು ಈ ಮುಂದಿನಂತಿವೆ:**

| ವಿಭಾಗಗಳು | ಅತ್ಯಂತ ಹಿಂದುಳಿದ | ಅತಿ ಹಿಂದುಳಿದ | ಹಿಂದುಳಿದ | ಒಟ್ಟು |
|---|---|---|---|---|
| ಕಲ್ಬುರ್ಗಿ | 21 | 5 | 2 | 28 |
| ಬೆಳಗಾವಿ | 5 | 12 | 14 | 31 |
| ಬೆಂಗಳೂರು | 11 | 13 | 9 | 33 |
| ಮೈಸೂರು | 2 | 10 | 10 | 22 |
| ಒಟ್ಟು | **39** | **40** | **35** | **114** |

ಪ್ರಾದೇಶಿಕ ಅಸಮತೋಲನ ನಿವಾರಿಸಲು ಡಾ॥ ಡಿ.ಎಂ.ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ರಚಿಸಲಾದ ಪ್ರಾದೇಶಿಕ ಅಸಮತೋಲನಾ ನಿವಾರಣಾ ಉನ್ನತಾಧಿಕಾರ ಸಮಿತಿಯು ಶಿಫಾರಸ್ಸು ಮಾಡಿರುವ ಅಂಶಗಳಲ್ಲಿ ಎಂಟು ವರ್ಷಗಳ ಅವಧಿಯ "ವಿಶೇಷ ಅಭಿವೃದ್ಧಿ ಯೋಜನೆಯ" ಅನುಷ್ಠಾನವು ಪ್ರಮುಖವಾಗಿರುತ್ತದೆ.

ರಾಜ್ಯದಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯನ್ನು 2007–08ನೇ ಸಾಲಿನಿಂದ ವಿವಿಧ ಇಲಾಖೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಅನುದಾನದ ಹಂಚಿಕೆಯನ್ನು ಎರಡು ಹಂತದಲ್ಲಿ ಮಾಡಲಾಗುತ್ತದೆ. ಮೊದಲನೆಯದಾಗಿ

ವಿಭಾಗಾವಾರು ಮತ್ತು ಎರಡನೇಯದಾಗಿ ತಾಲ್ಲೂಕುವಾರು. ಕಲಬುರ್ಗಿ ವಿಭಾಗಕ್ಕೆ 40%, ಬೆಳಗಾವಿ ವಿಭಾಗಕ್ಕೆ 20%, ಬೆಂಗಳೂರು ವಿಭಾಗಕ್ಕೆ 25% ಮತ್ತು ಮೈಸೂರು ವಿಭಾಗಕ್ಕೆ 15% ರಂತೆ ಅನುದಾನವನ್ನು ಹಂಚಿಕೆ ಮಾಡಲಾಗುತ್ತಿದೆ. ತಾಲ್ಲೂಕುವಾರು ಹಂಚಿಕೆಯನ್ನು ಆಯಾ ತಾಲ್ಲೂಕಿನ "ಸಂಚಿತ ದುಸ್ಥಿತಿ ಸೂಚ್ಯಾಂಕ"ದ (Cumulative Deprivation Index) ಆಧಾರದ ಮೇಲೆ ಮಾಡಲಾಗುತ್ತದೆ.

176 ತಾಲ್ಲೂಕುಗಳ ಪೈಕಿ ಉತ್ತರ ಕರ್ನಾಟಕ ತಾಲ್ಲೂಕುಗಳ ವರ್ಗೀಕರಣ

| ಜಿಲ್ಲೆ | ಅತ್ಯಂತ ಹಿಂದುಳಿದ ತಾಲ್ಲೂಕುಗಳು | ಅತೀ ಹಿಂದುಳಿದ ತಾಲ್ಲೂಕುಗಳು | ಹಿಂದುಳಿದ ತಾಲ್ಲೂಕುಗಳು | ಅಭಿವೃದ್ಧಿ ಹೊಂದಿದ ತಾಲ್ಲೂಕುಗಳು |
|---|---|---|---|---|
| ಕಲ್ಬುರ್ಗಿ | 22 (ಹರಪ್ಪನ ಹಳ್ಳಿ ಸೇರಿ) | 05 | 02 | 03 |
| ಬೆಳಗಾವಿ | 05 | 12 | 14 | 26 |
| **ಒಟ್ಟು** | **27** | **17** | **16** | **29** |

176 ತಾಲ್ಲೂಕುಗಳ ಪೈಕಿ ದಕ್ಷಿಣ ಕನ್ನಡ ಉತ್ತರ ಕರ್ನಾಟಕ ತಾಲ್ಲೂಕುಗಳ ವರ್ಗೀಕರಣ

| ಜಿಲ್ಲೆ | ಅತ್ಯಂತ ಹಿಂದುಳಿದ ತಾಲ್ಲೂಕುಗಳು | ಅತೀ ಹಿಂದುಳಿದ ತಾಲ್ಲೂಕುಗಳು | ಹಿಂದುಳಿದ ತಾಲ್ಲೂಕುಗಳು | ಅಭಿವೃದ್ಧಿ ಹೊಂದಿದ ತಾಲ್ಲೂಕುಗಳು |
|---|---|---|---|---|
| ಬೆಂಗಳೂರು | 10 | 13 | 09 | 18 |
| ಮೈಸೂರು | 02 | 10 | 10 | 15 |
| **ಒಟ್ಟು** | **12** | **23** | **19** | **33** |

ಉನ್ನತ ಮಟ್ಟದ ಸಮಿತಿಯು ಶಿಫಾರಸ್ಸು ಮಾಡಿದಂತೆ ರಾಜ್ಯದ ನಾಲ್ಕು ಪ್ರದೇಶಗಳಿಗೆ ಅನುಗುಣವಾದ 4 ವಿಭಾಗಗಳ ನಡುವಿನ ವೆಚ್ಚಗಳ ಹಂಚಿಕೆಯನ್ನು ಬಹುಶಃ ಸಮಗ್ರ ಸಂಯೋಜಿತ ಅಭಿವೃದ್ಧಿ ಸೂಚ್ಯಂಕವನ್ನು ಮತ್ತಷ್ಟು ಬಳಸಿಕೊಳ್ಳಬಹುದು ಮತ್ತು ಅದರಿಂದ ಸಂಚಿತ ಅಭಾವ ಸೂಚ್ಯಂಕವನ್ನು ಪಡೆಯಬಹುದು. ಈ ಸಂಪನ್ಮೂಲ ಹಂಚಿಕೆಯನ್ನು ಈ ಕೆಳಗಿನಂತೆ ತೋರಿಸಲಾಗುತ್ತದೆ. ಇದರ ಪ್ರಕಾರ ಉತ್ತರ ಕರ್ನಾಟಕಕ್ಕೆ ಶೇ.60ರಷ್ಟು ಹಾಗೂ ದಕ್ಷಿಣ ಕರ್ನಾಟಕಕ್ಕೆ ಶೇ.40ರಷ್ಟು ಸಂಪನ್ಮೂಲ ಹಂಚಿಕೆಯಾಗುತ್ತದೆ.

| ವಿಭಾಗವಾರು ದುಸ್ಥಿತಿ ಸೂಚ್ಯಂಕ | ಶೇಕಡಾವಾರು ಸಂಪನ್ಮೂಲ ಹಂಚಿಕೆ |
|---|---|
| ಗುಲ್ಬರ್ಗಾ = 8.06 | 40.0% |
| ಬೆಳಗಾವಿ = 4.12 | 20.0% |
| ಬೆಂಗಳೂರು = 5.32 | 25.0% |
| ಮೈಸೂರು = 2.76 | 15.0% |
| ಒಟ್ಟು = 20.26 | |

2007-08 ರಿಂದ 2024-25ನೇ ಸಾಲಿನವರೆಗೆ ವಿಶೇಷ ಅಭಿವೃದ್ಧಿ ಯೋಜನೆಯಲ್ಲಿ ಒಟ್ಟಾರೆ ರೂ. 48866.49 ಕೋಟಿಗಳನ್ನು ನಿಗದಿಪಡಿಸಿ ರೂ. 40159.42 ಕೋಟಿಗಳನ್ನು ಬಿಡುಗಡೆ ಮಾಡಿದ್ದು ರೂ. 36866.56 ಕೋಟಿಗಳನ್ನು ವೆಚ್ಚ ಮಾಡಲಾಗಿದೆ. ಕಲಬುರಗಿ ವಿಭಾಗಕ್ಕೆ ರೂ.15112.76 ಕೋಟಿಗಳನ್ನು ಹಂಚಿಕೆ ಮಾಡಿದ್ದು, ರೂ.12856.20 ಕೋಟಿಗಳು ಬಿಡುಗಡೆಯಾಗಿ, ರೂ.11629.58 ಕೋಟಿಗಳು ವೆಚ್ಚವಾಗಿರುತ್ತದೆ. ಬೆಳಗಾವಿ ವಿಭಾಗಕ್ಕೆ ರೂ.7925.02 ಕೋಟಿಗಳು ಹಂಚಿಕೆ ಮಾಡಿದ್ದು,

ರೂ.6676.95 ಕೋಟಿಗಳು ಬಿಡುಗಡೆಯಾಗಿ, ರೂ.6080.70 ಕೋಟಿಗಳು ವೆಚ್ಚವಾಗಿದ್ದು, ಒಟ್ಟಾರೆ ಉತ್ತರ ಕರ್ನಾಟಕಕ್ಕೆ ರೂ.23037.77 ಕೋಟಿಗಳು ಹಂಚಿಕೆ ಮಾಡಿದ್ದು, ರೂ.19533.15 ಕೋಟಿಗಳು ಬಿಡುಗಡೆಯಾಗಿ, ರೂ.17710.28 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

ಡಾ.ಡಿ.ಎಂ ನಂಜುಂಡಪ್ಪ ವರದಿಯ ಶೀಫಾರಸ್ಸಿನ್ವಯ 2007-08 ರಿಂದ 2024-25 ಅಂದರೆ 18 ವರ್ಷಗಳಲ್ಲಿ ಸುಮಾರು ರೂ.48866.49 ಕೋಟಿಗಳೂ ಹಂಚಿಕೆಯಾಗಿ, ರೂ.91.80 ರಷ್ಟು ಅಭಿವೃದ್ಧಿ ಕಾರ್ಯಗಳಿಗೆ / ಯೋಜನೆಗಳಿಗೆ ವೆಚ್ಚ ಮಾಡಲಾದರು ಸಹಾ ಪ್ರಾದೇಶಿಕ ಅಸಮತೋಲನೆಯನ್ನು ನಂಜುಂಡಪ್ಪ ವರದಿಯ ಶೀಫಾರಸ್ಸಿನಂತೆ ನಿವಾರಿಸಲು ಸಾಧ್ಯವಾಗದ ಕಾರಣ ಹಾಗೂ ಡಾ. ಡಿ.ಎಂ ನಂಜುಂಡಪ್ಪ ವರದಿಯು 25 ವರ್ಷಗಳ ಹಳೆಯದಾದ ಕಾರಣ ಮತ್ತು ಕೆಲವು ಸೂಚ್ಯಂಕಗಳು ಮೌಲ್ಯ ಕಳೆದು ಕೊಂಡಿರುವುದರಿಂದ, ಅಧ್ಯಯನ ಮಾಡಿ ತಾಲ್ಲೂಕುವಾರು/ಕ್ಷೇತ್ರವಾರು ಅವಶ್ಯಕತೆಯನ್ನು ಮನಗಂಡು, ಮಾನ್ಯ ಮುಖ್ಯಮಂತ್ರಿಗಳು ದಿನಾಂಕ:15.12.2023ರಂದು ಬೆಳಗಾವಿಯ ಸುವರ್ಣ ಸೌಧದ ಅಧಿವೇಶನದಲ್ಲಿ, ರಾಜ್ಯದಲ್ಲಿ ಪ್ರಸ್ತುತ ಇರುವ 240 ತಾಲ್ಲೂಕುಗಳ ಹಿಂದುಳಿದಿರುವಿಕೆಯನ್ನು ಅಧ್ಯಯನ ಮಾಡಿ ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕವನ್ನು (comprehensive composite development index (CCDI) ವನ್ನು ಪರಿಷ್ಕರಿಸಲು ಉನ್ನತ ಮಟ್ಟದ ಸಮಿತಿಯನ್ನು ರಚಿಸುವುದಾಗಿ ಘೋಷಿಸಿರುತ್ತಾರೆ.

2024-25ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ-248ರಲ್ಲಿ "ಡಾ॥ ಡಿ.ಎಂ. ನಂಜುಂಡಪ್ಪ ವರದಿಯನ್ನು 2002ರಲ್ಲಿ ಸಲ್ಲಿಸಲಾಗಿದ್ದು ಕಳೆದ 24 ವರ್ಷಗಳಲ್ಲಿ ಈ ವರದಿಯ ಆಧಾರದ ಮೇಲೆ ಹಿಂದುಳಿದ ಪ್ರದೇಶಗಳಲ್ಲಿ ಅಸಮತೋಲನೆಯನ್ನು ನಿವಾರಿಸಲು ಬಹಳಷ್ಟು ಯೋಜನೆಗಳನ್ನು ಮತ್ತು ಬಂಡವಾಳ ಹೂಡಿಕೆಯನ್ನು ಮಾಡಲಾಗಿದೆ. ಇದರಿಂದ ಆಗಿರುವ ಬದಲಾವಣೆಗಳು ಮತ್ತು ಪರಿಣಾಮಗಳನ್ನು ಅಧ್ಯಯನ ಮಾಡಲು ಪ್ರಸಕ್ತ ಸಾಲಿನಲ್ಲಿ ಒಂದು ಉನ್ನತಾಧಿಕಾರಿ ಸಮಿತಿಯನ್ನು ರಚಿಸಲಾಗುವುದು. ಈ ಸಮಿತಿಯ ಮೂಲಕ ಪ್ರಸ್ತುತ ರಾಜ್ಯದಲ್ಲಿನ ಆರ್ಥಿಕ ಮತ್ತು ಪ್ರಾದೇಶಿಕ ಅಸಮಾನತೆಯ ಆಧಾರದ ಮೇಲೆ ಜಿಲ್ಲೆ ಮತ್ತು ತಾಲ್ಲೂಕುಗಳನ್ನು ವರ್ಗೀಕರಿಸಿ ಹೊಸ ಅಭಿವೃದ್ಧಿ ಸೂಚ್ಯಂಕಗಳನ್ನು ತಯಾರಿಸಲಾಗುವುದು". ಎಂದು ಘೋಷಣೆ ಮಾಡಿರುತ್ತಾರೆ. ಅದರಂತೆ, ದಿನಾಂಕ:16.03.2024ರಂದು ಶ್ರೀ. ಪ್ರೋ. ಗೋವಿಂದ ರಾವ್ ಆರ್ಥಿಕ ತಜ್ಞರು ಇವರನ್ನು ಅಧ್ಯಕ್ಷರನ್ನಾಗಿ ನೇಮಿಸಿ ಅಧಿಸೂಚನೆ ಹೊರಡಿಸಲಾಗಿರುತ್ತದೆ ಹಾಗೂ ಮಾನ್ಯ ಮುಖ್ಯ ಮಂತ್ರಿಯವರ ಆದೇಶದಂತೆ ಈ ಕೆಳಕಂಡವರನ್ನು ಸದಸ್ಯರುಗಳನ್ನಾಗಿ ನೇಮಿಸಲಾಗಿದೆ.

1. ಶ್ರೀಯುತ. ಎಲ್.ಕೆ ಅತೀಕ್
2. ಡಾ॥ ಸೂರ್ಯನಾರಾಯಣ ಎಂ.ಹೆಚ್.
3. ಡಾ॥ ಎಸ್.ಟಿ. ಬಾಗಲಕೋಟೆ.
4. ಶ್ರೀಮತಿ. ಸಂಗೀತ.ಎನ್.ಕೆ

ಪ್ರಸ್ತುತ ಕರ್ನಾಟಕ ಪ್ರಾದೇಶಿಕ ಅಸಮತೋಲನಾ ನಿವಾರಣಾ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳು ವಿವಿಧ ಪ್ರಶ್ನಾವಳಿಗಳನ್ನು ಸಿದ್ದಪಡಿಸಿ ರಾಜ್ಯದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ಹಾಗೂ ಇತರೆ ಅಧಿಕಾರಿಗಳು ಮತ್ತು ಸಂಘ ಸಂಸ್ಥೆಗಳಿಗೆ ಮತ್ತು ಸರ್ಕಾರೇತರ ಸಂಸ್ಥೆಗಳಿಗೆ ಅಭಿಪ್ರಾಯ ನೀಡುವಂತೆ ಕೋರಲಾಗಿದೆ ಹಾಗೂ ಪ್ರಮುಖ ಖಾಸಗಿ ಉದ್ದಿಮೆದಾರರನ್ನು ಭೇಟಿ ಮಾಡಲಾಗುತ್ತಿದೆ.

- ಸರ್ಕಾರದ ಪ್ರಮುಖ ಸಚಿವರುಗಳನ್ನು ಭೇಟಿ ಮಾಡಿ ಪ್ರಾದೇಶಿಕ ಅಸಮತೋಲನಾ ನಿವಾರಣೆಗೆ ಸಂಬಂಧಿಸಿದಂತೆ ಅಭಿಪ್ರಾಯಗಳನ್ನು ಸಂಗ್ರಹಿಸಲಾಗುತ್ತಿದ್ದು, ಈಗಾಗಲೇ ಮಾನ್ಯ ಮಾನ್ಯ ಯೋಜನಾ ಸಚಿವರು, ಕಲ್ಯಾಣ ಕರ್ನಾಟಕ

ಪ್ರದೇಶಾಭಿವೃದ್ಧಿ ಮಂಡಳಿಯ ಅಧ್ಯಕ್ಷರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರು, ಅರಣ್ಯ ಮತ್ತು ಜೀವಿ ಪರಿಸರ ಶಾಸ್ತ್ರ ಇಲಾಖೆ ಸಚಿವರು, ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಇಲಾಖಾ ಸಚಿವರುಗಳನ್ನು, ಕಂದಾಯ ಇಲಾಖೆಯ ಸಚಿವರು ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರುನ್ನು ಭೇಟಿ ಮಾಡಿ ಮೊದಲ ಹಂತದ ಸಂವಾದ ನಡೆಸಿ ಅಭಿಪ್ರಾಯಗಳನ್ನು ಕ್ರೂಢೀಕರಿಸಲಾಗಿದೆ ವಿಭಾಗ ಮಟ್ಟದಲ್ಲಿ ಶಾಸಕರು, ಸಂಘ ಸಂಸ್ಥೆಗಳು, ಕೈಗಾರಿಕೋದ್ಯಮಿಗಳೊಂದಿಗೆ ಚರ್ಚಿಸಿ, ಅಭಿಪ್ರಾಯ ಸಂಗ್ರಹಿಸಲು ಉದ್ದೇಶಿಸಿ ಪ್ರಥಮವಾಗಿ ಕಲಬುರ್ಗಿ ವಿಭಾಗ ಮಟ್ಟದಲ್ಲಿ ಸಭೆ ಆಯೋಜಿಸಲಾಗಿತ್ತು ತದನಂತರ ಬೆಳಗಾವಿ ವಿಭಾಗ, ತೃತೀಯ ಹಂತದಲ್ಲಿ ಮೈಸೂರು ವಿಭಾಗ ಹಾಗೂ ಅಂತಿಮವಾಗಿ ಬೆಂಗಳೂರು ವಿಭಾಗದ ಚಿಕ್ಕಬಳ್ಳಾಪುರ ಹಾಗೂ ಚಿತ್ರದುರ್ಗ ಜಿಲ್ಲೆಯಲ್ಲಿ ಸಭೆಗಳನ್ನು ಏರ್ಪಡಿಸಲಾಗಿತ್ತು. ಸದರಿ ಸಭೆಗೆ ಅಧ್ಯಕ್ಷರು, ಸದಸ್ಯರುಗಳು, ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಹಾಗೂ ಅಧಿಕಾರಿ ಸಿಬ್ಬಂದಿಗಳು ಭೇಟಿ ಮಾಡಿ ಸಭೆಯಲ್ಲಿ ಹಾಜರಿದ್ದ ಜನಪ್ರತಿನಿಧಿಗಳು, ಇಲಾಖಾ ಮುಖ್ಯಸ್ಥರು, ಸರ್ಕಾರೇತರ ನೊಂದಾಯಿತ ಸಂಘ ಸಂಸ್ಥೆಗಳ ಅಧಿಕಾರಿಗಳು, ಉದ್ದಿಮೆದಾರರು, ಕೈಗಾರಿಕೋದ್ಯಮಗಳ ಪ್ರಮುಖರು, ಛೇಂಬರ್ಸ್ ಆಫ್ ಕಾಮರ್ಸ್‌ನಿಂದ ಹಾಜರಿದ್ದ 3 ರಿಂದ 4 ಜನ ಪ್ರತಿನಿಧಿಗಳೊಂದಿಗೆ ಸಂವಾದ ಸಭೆ ನಡೆಸಿ ಮಾಹಿತಿಗಳನ್ನು ಕಲೆಹಾಕಲಾಯಿತು. ಹಾಗೂಡಾ.ಡಿ.ಎಂ. ನಂಜುಂಡಪ್ಪ ವರದಿಯ ಅನುಷ್ಠಾನದಿಂದ ತಾಲ್ಲೂಕುಗಳು ಅಭಿವೃದ್ಧಿ ಹೊಂದಿರುವ ಬಗ್ಗೆ ಹಾಗೂ ಅಭಿವೃದ್ಧಿ ಹೊಂದದೇ ಇರುವ ತಾಲ್ಲೂಕುಗಳನ್ನು ಗುರುತಿಸಿ ಹೊಸದಾಗಿ ಸೂಚ್ಯಂಕವನ್ನು ಕಂಡುಹಿಡಿದು ಪ್ರಾದೇಶಿಕ ಅಸಮತೋಲನವನ್ನು ನಿವಾರಣೆ ಮಾಡಲು ಪ್ರೊ. ಎಂ. ಗೋವಿಂದರಾವ್, ಆರ್ಥಿಕ ತಜ್ಞರು ಇವರ ಅಧ್ಯಕ್ಷತೆಯಲ್ಲಿ, ಸಮಿತಿಯ ಸದಸ್ಯ ಕಾರ್ಯದರ್ಶಿಗಳು, ಸಮಿತಿ ಸದಸ್ಯರು, ಸಮಿತಿಯ ಸದಸ್ಯರುಗಳು ಹಾಗೂ ಇಲಾಖೆಯ ನಿರ್ದೇಶಕರು, ಅಧಿಕಾರಿ/ನೌಕರರೊಂದಿಗೆ ರಾಜ್ಯದ ಎಲ್ಲಾ 30 ಜಿಲ್ಲೆಗಳಿಗೆ ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಏರ್ಪಡಿಸಿದ್ದ ಸಂವಾದ ಸಭೆಗೆ ಹಾಜರಿದ್ದ ಪ್ರಮುಖರ ಸಲಹೆ ಮತ್ತು ಸೂಚನೆಗಳನ್ನು ಸಂಗ್ರಹಿಸಲಾಯಿತು. ಹೀಗೆ ವಿಭಾಗ ಮಟ್ಟದ ಹಾಗೂ ಜಿಲ್ಲೆಗಳ ಪ್ರವಾಸವನ್ನು ದಿನಾಂಕ:30.01.2025 ರಂದು ಪ್ರಾರಂಭಿಸಿ ದಿನಾಂಕ: 18.06.2025 ರಂದು ಮುಕ್ತಾಯಗೊಳಿಸಲಾಯಿತು.

ಈ ಮೇಲ್ಕಂಡಂತೆ ಕರ್ನಾಟಕ ಪ್ರಾದೇಶಿಕ ಅಸಮತೋಲನಾ ನಿವಾರಣಾ ಸಮಿತಿಯು ಕಾರ್ಯನಿರ್ವಹಿಸುತ್ತಿದ್ದು, ಕರಡು ವರದಿಯು ಆಂಗ್ಲ ಭಾಷೆಯಲ್ಲಿ ಸಿದ್ಧವಾಗಿರುತ್ತದೆ. ಪ್ರಸ್ತುತ ವರದಿಯ ಪರಿಶೀಲನೆಯು ಮುಕ್ತಾಯಗೊಳ್ಳುವ ಹಂತದಲ್ಲಿದ್ದು ಅಂತಿಮಗೊಂಡ ನಂತರ ಕನ್ನಡ ಭಾಷೆಗೆ ತರ್ಜುಮೆ ಮಾಡುವ ಕೆಲಸವು ಬಾಕಿಯಿರುತ್ತದೆ. ಅಂತಿಮ ವರದಿಯನ್ನು ಮಾನ್ಯ ಮುಖ್ಯಮಂತ್ರಿಗಳ ಅನುಮೋದನೆಗೆ ಸಲ್ಲಿಸಿ ಅಂಗಿಕರಿಸಿದ ನಂತರ ಸರ್ಕಾರಕ್ಕೆ ಸಲ್ಲಿಸಲಾಗುವುದು.

************************************

## ಉತ್ತರ ಕರ್ನಾಟಕದ ಹಿಂದುಳಿದ ತಾಲ್ಲೂಕುಗಳಲ್ಲಿ ಈ ಕೆಳಕಂಡ ಪ್ರಮುಖ ಇಲಾಖೆಗಳಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಕ್ರಮಗಳ ವಿವರ

### ಕೃಷಿ

ರಾಜ್ಯದ ಹಿಂದುಳೀದ ಪ್ರದೇಶಗಳಲ್ಲಿ ಕೃಷಿ ವಿಸ್ತರಣಾ ಯೋಜನೆಗಳು ತರಬೇತಿ ಕೇಂದ್ರಗಳು ಕೃಷಿ ಸಹಾಯಕ ಸಮೂಹಗಳ ಸಂಖ್ಯೆಯನ್ನು ಹೆಚ್ಚಿಸಲು ಕ್ರಮವಹಿಸುತ್ತಿದ್ದು, ಇದರಿಂದ ಉತ್ತರ ಕರ್ನಾಟಕದಲ್ಲಿ 7 ರೈತರ ತರಬೇತಿ ಕೇಂದ್ರಗಳಿವೆ. ರೈತ ಮಿತ್ರ ಯೋಜನೆಯಲ್ಲಿ ಹೋಬಳಿ ಮಟ್ಟದಲ್ಲಿ ರೈತ ಸಂಪರ್ಕ ಕೇಂದ್ರಗಳನ್ನು 2001 ರಲ್ಲಿ ಪ್ರಾರಂಭಿಸಲಾಗಿದೆ. ಪ್ರಸ್ತುತ ಕೃಷಿ ಇಲಾಖೆಯಡಿ 742 ರೈತ ಸಂಪರ್ಕ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ ಹಾಗೂ 23 ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. 2024-25ನೇ ಸಾಲಿನಲ್ಲಿ ಗದಗ, ಯಾದಗಿರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಹೊಸದಾಗಿ ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳನ್ನು ಸಹ ಸ್ಥಾಪಿಸಲು ಕ್ರಮವಹಿಸಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ರೈತರಿಗೆ ಹವಾಮಾನ ಸ್ಥಿತಿ, ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳ ಬೆಲೆ, ಕೃಷಿ ಪದ್ಧತಿಗಳಲ್ಲಿನ ಇತ್ತೀಚಿನ ಬೆಳವಣಿಗೆ ಮುಂತಾದವುಗಳ ಬಗ್ಗೆ ಅಂದಿಂದಿನ ಮಾಹಿತಿಯನ್ನು ಒದಗಿಸಲು ರೈತ ಕರೆ ಕೇಂದ್ರವನ್ನು ಸ್ಥಾಪಿಸಿ ಕೃಷಿಗೆ ಸಂಬಂಧಿಸಿದ/ಸಲಹೆಗಳನ್ನು ಒದಗಿಸಲಾಗುತ್ತಿದೆ. ನೀರಿನ ಸಮರ್ಥ ಬಳಕೆಯನ್ನು ಪ್ರೋತ್ಸಾಹಿಸಲು ಸರ್ಕಾರವು 90% ಸಹಾಯಧನದಲ್ಲಿ ರೈತರಿಗೆ ಸೂಕ್ಷ್ಮ ನೀರಾವರಿ ಘಟಕಗಳನ್ನು ಒದಗಿಸುತ್ತಿದೆ.

ರೈತ ಸಂಪರ್ಕ ಕೇಂದ್ರಗಳು ಹಾಗೂ ಗೋದಾಮುಗಳನ್ನು ನಿರ್ಮಿಸಿರುವುದರಿಂದ ಗುಣಮಟ್ಟದ ಕೃಷಿ ಪರಿಕರಗಳನ್ನು ಸಂಗ್ರಹಿಸಿ ರೈತರಿಗೆ ಸಕಾಲದಲ್ಲಿ ಗುಣಮಟ್ಟದ ಕೃಷಿ ಪರಿಕರಗಳನ್ನು ನೀಡಲು ಅನುಕೂಲವಾಗಿರುತ್ತದೆ.

ಮಣ್ಣಿನ ಸತ್ವ ಹೆಚ್ಚಿಸುವಿಕೆ ಯೋಜನೆಯಡಿ ವಿವಿಧ ಕೃಷಿ ಪರಿಕರಗಳನ್ನು ಸಹಾಯಧನದಲ್ಲಿ ರೈತ ಸಂಪರ್ಕ ಕೇಂದ್ರಗಳ ಮೂಲಕ ಒದಗಿಸಲಾಗಿದ್ದು, ಇದರಿಂದಾಗಿ ಕೃಷಿ ಬೆಳೆಗಳ ಉತ್ಪಾದನೆಗೆ ಸಹಾಯಕವಾಗಿರುತ್ತದೆ.

ಕೃಷಿ ಭಾಗ್ಯ ಯೋಜನೆಯ ಅನುಷ್ಠಾನದಿಂದಾಗಿ ರೈತರ ಜಮೀನಿನಲ್ಲಿ ಬಿದ್ದ ಮಳೆ ನೀರನ್ನು ಪೋಲಾಗದಂತೆ ಕೃಷಿ ಹೊಂಡಗಳಲ್ಲಿ ಸಂಗ್ರಹಿಸಿ ರಕ್ಷಣಾತ್ಮಕ ನೀರಾವರಿಯಾಗಿ ಬೆಳೆಗಳಿಗೆ ನೀಡಿ ಕೃಷಿ ಉತ್ಪಾದಕತೆ ಹೆಚ್ಚಿಸುವುದಲ್ಲದೇ, ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿ ಹೆಚ್ಚಿನ ಆದಾಯ ಗಳಿಸಲು ಸಹಕಾರಿಯಾಗಿದೆ.

ಸುಧಾರಿತ ತಳಿಗಳ ಉತ್ತಮ ಗುಣಮಟ್ಟದ ಬಿತ್ತನೆ ಬೀಜಗಳನ್ನು ವಿತರಿಸಿರುವುದರಿಂದ ಬೀಜ ಬದಲಿಕೆ ಅನುಪಾತವನ್ನು ಸುಧಾರಿಸುವಲ್ಲಿ ಉಪಯುಕ್ತವಾಗಿದೆ.

ಭೂಚೇತನ ಯೋಜನೆಯ ಅನುಷ್ಠಾನದಿಂದಾಗಿ ಮಳೆಯಾಶ್ರಿತ ಕೃಷಿಯನ್ನು ಸುಸ್ಥಿರ ಕೃಷಿಯನ್ನಾಗಿ ರೂಪಿಸಿದ್ದು, ಸಮಗ್ರ ಪೋಷಕಾಂಶಗಳ ಬಳಕೆಯಿಂದ ಬೆಳೆಯ ಉತ್ಪಾದಕತೆಯನ್ನು ಹೆಚ್ಚಿಸುವುದಲ್ಲದೇ ಉತ್ತಮ ಇಳುವರಿಯಿಂದಾಗಿ ರೈತರ ಆದಾಯ ಹೆಚ್ಚಿಸಲು ನೆರವಾಗಿದೆ.

**ತೋಟಗಾರಿಕೆ**

ಉತ್ತರ ಕರ್ನಾಟಕದಲ್ಲಿ ಪ್ರಸ್ತುತ 6 ತೋಟಗಾರಿಕೆ ತರಬೇತಿ ಕೇಂದ್ರಗಳನ್ನು ಮತ್ತು ದಕ್ಷಿಣ ಕರ್ನಾಟಕದಲ್ಲಿ 5 ತೋಟಗಾರಿಕೆ ತರಬೇತಿ ಕೇಂದ್ರಗಳು ಒಟ್ಟು 11 ತೋಟಗಾರಿಕೆ ತರಬೇತಿ ಕೇಂದ್ರಗಳಲ್ಲಿ 432 ರೈತ ಮಕ್ಕಳಿಗೆ 10 ತಿಂಗಳ ವಸತಿ ಸಹಿತ ಉಚಿತವಾಗಿ ತರಬೇತಿಯನ್ನು ನೀಡಲಾಗುತ್ತಿದೆ. ಉತ್ತರ ಕರ್ನಾಟಕದ ರಾಘವೇಂದ್ರ ತೋಟಗಾರಿಕೆ ಕ್ಷೇತ್ರ ರಾಯಚೂರು ಜಿಲ್ಲೆಯಲ್ಲಿ ಹೊಸದಾಗಿ ತೋಟಗಾರಿಕೆ ತರಬೇತಿ ಕೇಂದ್ರವನ್ನು ಪ್ರಾರಂಭಿಸಲು ಕ್ರಮವಹಿಸಲಾಗಿದೆ.

ತೋಟಗಾರಿಕೆಗೆ ಸಂಬಂಧಿಸಿದಂತೆ, 6 ಉತ್ಕೃಷ್ಟ ಕೇಂದ್ರಗಳನ್ನು ಹಾಗೂ 6 ಜೈವಿಕ ಕೇಂದ್ರಗಳನ್ನು ರಚಿಸಲಾಗಿದ್ದು, ಈ ಪೈಕಿ ತಲಾ 2 ಅನ್ನು ಉತ್ತರ ಕರ್ನಾಟಕದಲ್ಲಿ ರಚಿಸಲಾಗಿದೆ. ವಿವರ ಈ ಕೆಳಕಂಡಂತಿದೆ.

1. ಧಾರವಾಡ ಜಿಲ್ಲೆಯಲ್ಲಿ ಕುಂಭಾಪುರದಲ್ಲಿ ತರಕಾರಿ ಬೆಳಗಳ ಉತ್ಕೃಷ್ಟ ಕೇಂದ್ರವನ್ನು
2. ಬಾಗಲಕೋಟೆ ಜಿಲ್ಲೆಯಲ್ಲಿ ದಾಳಿಂಬೆ ಉತ್ಕೃಷ್ಟ ಕೇಂದ್ರವನ್ನು ರಚಿಸಲಾಗಿದೆ.

ಸದರಿ ಕೇಂದ್ರಗಳಲ್ಲಿ ಮಾವು ಬೆಳೆ, ತೋಟಗಾರಿಕೆ ಬೆಳೆಗಳ ನಿಖರ ಬೇಸಾಯ, ತರಕಾರಿ ಬೆಲೆಗಳು, ದಾಳಿಂಬೆ, ಪುಷ್ಪ ಬೆಳೆಗಳ ಮತ್ತು ಸಂರಕ್ಷಿತ ಬೇಸಾಯಗಳ ವೈಜ್ಞಾನಿಕ ತಂತ್ರಜ್ಞಾನಗಳ ಬಗ್ಗೆ ಪರಿಚಯಿಸಲಾಗುತ್ತಿದೆ. ಸದರಿ ಕೇಂದ್ರಗಳಲ್ಲಿ ರೈತರಿಗೆ, ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ ವಿವಿಧ ಕೌಶಲ್ಯಾಭಿವೃದ್ಧಿ, ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ಬೇಡಿಕೆ ಅನುಸಾರ ವಸತಿ ಸಹಿತ ವ್ಯವಸ್ಥೆ ಕಲ್ಪಿಸಲಾಗಿದೆ. ಇದರಿಂದ ನೂತನ ಅವಿಷ್ಕಾರಗಳನ್ನು ರೈತರಿಗೆ ಮತ್ತು ಸಾರ್ವಜನಿಕರಿಗೆ ತಲುಪಿಸಲಾಗುತ್ತಿದೆ. ಈ ಕೇಂದ್ರಗಳಲ್ಲಿ ಉತ್ಪಾದಿಸಲಾದ ಕಸಿ ಸಸಿಗಳನ್ನು ಇಲಾಖಾ ದರಗಳಲ್ಲಿ ಮಾರಾಟ ಮಾಡಲಾಗುತ್ತಿದೆ.

ಜೈವಿಕ ಕೇಂದ್ರಗಳನ್ನು ಬೆಳಗಾವಿ ಮತ್ತು ಬೀದರ್ ಜಿಲ್ಲೆಯಲ್ಲಿ ರಚಿಸಲಾಗಿದೆ. ಈ ಕೇಂದ್ರಗಳಲ್ಲಿ ತೋಟಗಾರಿಕೆ ಬೆಳೆಗಳ ಉತ್ತಮ ಗುಣಮಟ್ಟದ ಸಸಿ ಮತ್ತು ಕಸಿ ಗಿಡಗಳ ಉತ್ಪಾದನೆ, ಅಂಗಾಂಶ ಕೃಷಿ, ಅಣಬೆ ಉತ್ಪಾದನೆ, ಮಣ್ಣು, ಎಲೆ ಮತ್ತು ನೀರು ವಿಶ್ಲೇಷಣೆಗೆ ಸಂಬಂಧಿಸಿದ ವಿವಿಧ ಪ್ರಯೋಗ ಶಾಲೆಗಳನ್ನು ಸ್ಥಾಪಿಸಲಾಗಿದೆ.

ರಾಜ್ಯದಲ್ಲಿ UAS (Universities of Agricultural science) ಧಾರವಾಡ, ರಾಯಚೂರಿನಲ್ಲಿ ಸ್ಥಾಪಿಸಲಾಗಿದ್ದು, UAHS (Universities of Agricultural and Horticultural science)

(ಶಿವಮೊಗ್ಗ) ವಿಶ್ವವಿದ್ಯಾಲಯಗಳ ಅಡಿ ಬರುವ ತೋಟಗಾರಿಕೆ ಕಾಲೇಜುಗಳು ಉತ್ತರ ಕರ್ನಾಟಕದ ಅರಬಾವಿ ಗೋಕಾಕ್ ತಾಲ್ಲೂಕು, ಮುನಿರಾಬಾದ್ ಕೊಪ್ಪಳ ಜಿಲ್ಲೆ, ಬೀದರ್, ಬಾಗಲಕೋಟೆ, ಹಾವೇರಿ ಮತ್ತು ಶಿರಸಿಯಲ್ಲಿ ಸ್ಥಾಪಿತವಾಗಿದ್ದು, ಸದರಿ ಕಾಲೇಜುಗಳಲ್ಲಿ ರೈತರ ಸಮಗ್ರ ತೋಟಗಾರಿಕೆ ಪದ್ಧತಿಗಳ ಬಗ್ಗೆ ಆಧುನಿಕ ತಂತ್ರಜ್ಞಾನಗಳ ಮಾಹಿತಿಯನ್ನು ತರಬೇತಿ/ ಕಾರ್ಯಗಾರಗಳ ಮೂಲಕ ನೀಡಲಾಗುತ್ತಿದೆ.

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಒಟ್ಟಾರೆ 82 ಶೀತಲ ಗೃಹಗಳನ್ನು ರಾಜ್ಯಾದಂತ ವಿವಿಧ ಸ್ಥಳಗಳಲ್ಲಿ ಸ್ಥಾಪಿಸಲಾಗಿದ್ದು, ಈ ಪೈಕಿ 41 ಶೀತಲ ಗೃಹಗಳನ್ನು ವಿಶೇಷ ಅಭಿವೃದ್ಧಿ ಯೋಜನೆಯಡಿ ಹಿಂದುಳಿದ ತಾಲ್ಲೂಕುಗಳಲ್ಲಿ ಸ್ಥಾಪಿಸಲಾಗಿದೆ.

**ತೋಟಗಾರಿಕೆ ಸೇವಾ ಕೇಂದ್ರಗಳ ಸ್ಥಾಪನೆ**

ಬಿಜಾಪುರದಲ್ಲಿ ಕೆಪೆಕ್ ಸಂಸ್ಥೆಯು ತೋಟಗಾರಿಕಾ ಬೆಳೆಗಳಿಗಾಗಿ ರಫ್ತು ಬ್ಯಾಕೋಸ್ ಅನ್ನು ಸ್ಥಾಪಿಸಿರುತ್ತದೆ. ಬಿಜಾಪುರದಲ್ಲಿ ನಿಂಬೆಹಣ್ಣು ಬೆಳೆಗಾರರನ್ನು ಉದ್ದೇಶಿಸಿ, ನಿಂಬೆ ಮಂಡಳಿಯ ವತಿಯಿಂದ ವಿಶೇಷವಾದ ರಫ್ತು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

2017–18ನೇ ಸಾಲಿನಲ್ಲಿ sdp ಯೋಜನೆಯಡಿ ಒಳಪಡುವ ತಾಲ್ಲೂಕುಗಳಲ್ಲಿ 167 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳಾಗಿ ಮೇಲ್ದರ್ಜೆಗೇರಿಸಿ ಕಾರ್ಯ ನಿರ್ವಹಿಸಲಾಗುತ್ತಿದೆ.

**ಪಶುಸಂಗೋಪನೆ ಮತ್ತು ಮೀನುಗಾರಿಕೆ**

ರಾಜ್ಯದಲ್ಲಿ 6 ಪಶುವೈದ್ಯಕೀಯ ಮಹಾವಿದ್ಯಾಲಯಗಳು, 2 ಹೈನು ವಿಜ್ಞಾನ ಮಹಾವಿದ್ಯಾಲಯಗಳು ಮತ್ತು 1 ಮೀನುಗಾರಿಕಾ ಮಹಾವಿದ್ಯಾಲಯಗಳಿವೆ. ವಿಶ್ವವಿದ್ಯಾಲಯವು ಹೆಚ್ಚಿನ ಸಂಖ್ಯೆಯಲ್ಲಿ ಪಶುವೈದ್ಯಕೀಯ ಮಹಾವಿದ್ಯಾಲಯಗಳನ್ನು ಹೊಂದಲು ಡಾ.ಡಿ.ಎಂ.ನಂಜುಂಡಪ್ಪ ಶಿಫಾರಸ್ಸಿನಿಂದಲೇ ಸಾಧ್ಯವಾಗಿದೆ. ಈ ಪೈಕಿ ಉತ್ತರ ಕರ್ನಾಟಕದ ಬೀದರ್, ಗದಗ್, ಅಥಣಿ, ಕಲಬುರಗಿ ಜಿಲ್ಲೆಗಳಲ್ಲಿ ಪಶುವೈದ್ಯಕೀಯ ಮಹಾವಿದ್ಯಾಲಯಗಳನ್ನು ಸ್ಥಾಪಿಸಲಾಗಿದೆ.

ಸಣ್ಣ ನೀರಾವರಿ ಇಲಾಖೆಯಡಿ ವಲಯ ಮಟ್ಟದ ಕಚೇರಿಯು ವಿಜಯಪುರ ಜಿಲ್ಲಾ ಕೇಂದ್ರ ಸ್ಥಾನದಲ್ಲಿ, ವೃತ್ತ ಕಚೇರಿಗಳು ಬೆಳಗಾವಿ ಹಾಗೂ ಕಲಬುರಗಿ ಕಂದಾಯ ವಿಭಾಗ ಪ್ರದೇಶದಲ್ಲಿ ಹಾಗೂ ಬೆಳಗಾವಿ, ಧಾರವಾಡ, ಹಳಿಯಾಳ, ವಿಜಯಪುರ, ಕಲಬುರಗಿ, ಬೀದರ, ಬಳ್ಳಾರಿ ಮತ್ತು ಕೊಪ್ಪಳದಲ್ಲಿ ವಿಭಾಗ ಕಚೇರಿಗಳು ಕಾರ್ಯ ನಿರ್ವಹಿಸುತ್ತಿವೆ. ಅಲ್ಲದೆ, ಸದರಿ ವಿಭಾಗ ವ್ಯಾಪ್ತಿಯಲ್ಲಿ ವಿವಿಧ ತಾಲ್ಲೂಕು ಕೇಂದ್ರಗಳಲ್ಲಿ ಉಪ ವಿಭಾಗ ಕಚೇರಿಗಳು ಕಾರ್ಯ ನಿರ್ವಹಿಸುತ್ತಿವೆ.

ನೀರಾವರಿ ಇಲಾಖೆ (ಬೃಹತ್ ಮತ್ತು ಮಧ್ಯಮ)

ವಿಶೇಷ ಅಭಿವೃದ್ಧಿ ಯೋಜನೆಯಡಿ ಜಲ ಸಂಪನ್ಮೂಲ ಇಲಾಖೆ (ಬೃಹತ್ ಮತ್ತು ಮಧ್ಯಮ ನೀರಾವರಿ) ಗೆ 2007–08ರಿಂದ 2021–22ರ ವರೆಗೆ ರೂ.8037.09 ಕೋಟಿ ಹಂಚಿಕೆಯಾಗಿ, ರೂ.7170.83 ಕೋಟಿ ಬಿಡುಗಡೆಯಾಗಿದ್ದು ರೂ.6761.57 ಕೋಟಿಗಳನ್ನು ಹಿಂದುಳಿದ ತಾಲ್ಲೂಕುಗಳ ಕಾಮಗಾರಿಗಳಿಗೆ ಖರ್ಚು ಮಾಡಲಾಗಿದೆ.

ಸಣ್ಣನೀರಾವರಿ

ಸಣ್ಣ ನೀರಾವರಿ ಇಲಾಖೆಯಿಂದ 40 ಹೆಕ್ಟೇಲ್ ದಿಂದ 2000 ಹೆಕ್ಟೇರ್ ವರೆಗೆ ಕೃಷಿ ಜಮೀನಿಗೆ ಪರೋಕ್ಷವಾಗಿ/ಅಪರೋಕ್ಷವಾಗಿ ನೀರಾವರಿ ಸೌಲಭ್ಯ ಕಲ್ಪಿಸುವಂತಹ ಸಣ್ಣ ನೀರಾವರಿ ಯೋಜನೆಗಳಾದ ನೀರಾವರಿ ಕೆರೆಗಳು, ಜಿನುಗು ಕರೆಗಳು, ಅಣೆಕಟ್ಟು, ಪಿಕಪ್, ಬಂದಾರ, ಚೆಕ್ ಡ್ಯಾಂ, ಬ್ರಿಡ್ಜ್ ಕಂ ಬ್ಯಾರೇಜ್, ಕಿಂಡಿ ಅಣೆಕಟ್ಟು ಉಪ್ಪು ನೀರು ಕೃಷಿ ಭೂಮಿಗೆ ನುಗ್ಗುವುದನ್ನು ತಡೆಗಟ್ಟಲು ಕ್ಷಾರ ಭೂಮಿ ಯೋಜನೆಗಳು, ಏತ ನೀರಾವರಿ ಯೋಜನೆಗಳಂತಹ ಸಣ್ಣ ನೀರಾವರಿ ಯೋಜನೆಗಳನ್ನು ಪ್ರತಿ ವರ್ಷ ಇಲಾಖೆಗೆ ಒದಗಿಸಲಾಗುವ ಅನುದಾನ ಹಾಗೂ ಸದರಿ ಯೋಜನೆಗಳ ತಾಂತ್ರಿಕ ಹಾಗೂ ಆರ್ಥಿಕ ಕಾರ್ಯಸಾಧ್ಯತೆಯ ಆಧಾರದ ಮೇಲೆ ಕೈಗೊಳ್ಳಲಾಗುತ್ತಿದೆ. ಅಲ್ಲದೆ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದ ರೈತರ ಕೃಷಿ ಭೂಮಿಗೆ ಕೊಳವೆ ಬಾವಿ ಮೂಲಕ ಏತ ನೀರಾವರಿ ಯೋಜನೆಗಳ ಮೂಲಕ ಹಾಗೂ ಚೆಕ್ ಡ್ಯಾಂ ಗಳ ಮೂಲಕ ನೀರಾವರಿ ಸೌಲಭ್ಯ ಕಲ್ಪಿಸುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಪ್ರಸ್ತುತ ವರ್ಷ ಸಣ್ಣ ನೀರಾವರಿ ಉತ್ತರ ವಲಯಕ್ಕೆ ವಿವಿಧ ಲೆಕ್ಕಶೀರ್ಷಿಕೆ ಗಳಡಿ 764.52 ಕೋಟಿ ರೂ.ಗಳ ಅನುದಾನ ಹಂಚಿಕೆ ಮಾಡಲಾಗಿದೆ ಹಾಗೂ 10289 ಹೆಕ್ಟೇರ್ ನೀರಾವರಿ ಪ್ರದೇಶವನ್ನು ಸೃಜಿಸಲು ಯೋಜಿಸಲಾಗಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

ರಾಜ್ಯದಲ್ಲಿ ಜಲಮೂಲದ ಗುಣಮಟ್ಟ ಕೋರತೆ ಇರುವ ಜನವಸತಿ ಗ್ರಾಮಗಳಿಗೆ ಪರ್ಯಾಯ ಗುಣಮಟ್ಟ ಇರುವ ಜಲಮೂಲದಿಂದ ಅಥವಾ ಶುದ್ಧ ಕುಡಿಯುವ ನೀರು ಘಟಕಗಳಿಂದ ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಉತ್ತರ ಕರ್ನಾಟಕದ ಬಳ್ಳಾರಿ, ಗದಗ, ಕೊಪ್ಪಳ ಮತ್ತು ಗುಲ್ಬಾರ್ಗ ಜಿಲ್ಲೆಗಳಲ್ಲಿ ನಿಗದಿತ ಪ್ರಮಾಣದ ನೀರನ್ನು ಒದಗಿಸಲು ಸ್ಥಿರ ಮೇಲ್ಮೈ ನೀರಿನ ಮೂಲವನ್ನು ಕಾತರಿ ಪಡಿಸುವ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ಜಲ್ ಜೀವನ್ ಮಿಷನ್ ಅಡಿಯಲ್ಲಿ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಒಟ್ಟಾರೆ ರಾಜ್ಯದಲ್ಲಿ 101.31 ಲಕ್ಷಗಳ ಗ್ರಾಮೀಣ ಮನೆಗಳ ಪೈಕಿ 87.49 ಲಕ್ಷಗಳ ಮನೆಗಳಿಗೆ ಕಾರ್ಯಾತ್ಮಕ ನಳ ನೀರು ಸಂಪರ್ಕ ಒದಗಿಸಲಾಗಿದೆ ಬಾಕಿ ಇರುವ ಗ್ರಾಮಗಳಿಗೂ ಸಹ ನಿಗದಿತ ಪ್ರಮಾಣ ಮತ್ತು ಗುಣಮಟ್ಟ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲು ಕ್ರಮವಹಿಸಲಾಗುತ್ತಿದೆ.

ಕೌಶಲ್ಯಾಭಿವೃದ್ಧಿ

2007–08 ರಿಂದ ಉತ್ತರ ಕರ್ನಾಟಕದಲ್ಲಿ 7 ನೂತನ GTCC ಕೇಂದ್ರಗಳನ್ನು ಹುಮ್ನಾಬಾದ್, ಚಿಕ್ಕೋಡಿ, ಗೋಕಾಕ್, ಕೊಪ್ಪಳ, ಯಾದಗಿರಿ, ಹಾವೇರಿ ಮತ್ತು ಶಿಗ್ಗಾಂವ್ ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿದೆ. 2024–25ನೇ ಸಾಲಿನ ಆಯವ್ಯಯ ಘೋಷಣೆಯಲ್ಲಿ ಉತ್ತರ ಕರ್ನಾಟಕದ ರೋಣ ಮತ್ತು ಬಳ್ಳಾರಿಯಲ್ಲಿ ನೂತನ GTCC ಕೇಂದ್ರಗಳನ್ನು ಮತ್ತು ಕಲಬುರಗಿ ಹಾಗೂ ಕೊಪ್ಪಳದ ತಳಕಲ್‌ನಲ್ಲಿ ನೂತನ ಎಂಎಸ್‌ಡಿಸಿ ಕೇಂದ್ರಗಳನ್ನು ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ. 2025–26ನೇ ಸಾಲಿನ ಆಯವ್ಯಯ ಘೊಷಣೆಯಡಿ ಉತ್ತರ ಕರ್ನಾಟಕದ ಇಂಡಿ, ಕಂಪ್ಲಿ, ಸಿಂಧನೂರು ಮತ್ತು ರಾಯಚೂರು ಗ್ರಾಮೀಣ ಪ್ರದೇಶಗಳಲ್ಲಿ ನೂತನ GTCC ಕೇಂದ್ರಗಳನ್ನು ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ. ಅನುಷ್ಠಾನ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಜರ್ಮನ್ ತಾಂತ್ರಿಕ ತರಬೇತಿ ಸಂಸ್ಥೆಯನ್ನು ಉತ್ತರ ಕರ್ನಾಟಕದ ಕಲಬುರಗಿ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿದೆ. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದಡಿ ಬುಡಕಟ್ಟು ಜನಾಂಗದ ಸ್ವ-ಸಹಾಯ ಗುಂಪಿನ ಮಹಿಳೆಯರಿಗೆ ಸುಸ್ಥಿರ ಜೀವನೋಪಾಯ ಚಟುವಟಿಕೆಗಳನ್ನು ಕಲ್ಪಿಸಲು ವನಧನ ವಿಕಾಸ ಕೇಂದ್ರಗಳನ್ನು 100% ಕೇಂದ್ರ ಸರ್ಕಾರದ ಅನುದಾನದಡಿ ರಾಜ್ಯದ 31 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಕಾರ್ಯಕ್ರಮದಡಿ ಒಟ್ಟು 100 ವನದನ ವಿಕಾಸ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ.

ರಾಜ್ಯದಲ್ಲಿ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಕಾರ್ಯಕ್ರಮದಡಿ ಒಟ್ಟು 31 ಕೇಂದ್ರಗಳು ಸಂಬಂಧಿಸಿದ ಜಿಲ್ಲಾಲೀಡ್ ಬ್ಯಾಂಕ್‌ಗಳ ಮುಖಾಂತರ ಕಾರ್ಯನಿರ್ವಹಿಸುತ್ತಿವೆ. ಈ ಕೇಂದ್ರಗಳಡಿ ಗ್ರಾಮೀಣ ಯುವಕ–ಯುವತಿಯರಿಗೆ ಉಚಿತವಾಗಿ ಸ್ವಯಂ ಉದ್ಯೋಗ ತರಬೇತಿಗಳನ್ನು ಒದಗಿಸಿ ಬ್ಯಾಂಕ್ ಲಿಂಕೇಜ್ ಸಾಲ ಸೌಲಭ್ಯ ಪಡೆಯಲು ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ ಮೂಲಕ ಬೆಂಬಲಿಸಲಾಗುತ್ತಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಉತ್ತರ ಕರ್ನಾಟಕದ ಸಂಖ್ಯೆಯ ಬೆಳವಣಿಗೆಯ್ನು ನಿಯಂತ್ರಿಸಲು ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮದಡಿ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದ್ದು, NFHS 4 ಸರ್ವೆ ಅಂಕಿ ಅಂಶಗಳಿಗೆ ಹೋಲಿಸಿದಾಗ ಉತ್ತರ ಕರ್ನಾಟಕದಲ್ಲಿ ಜನಸಂಖ್ಯೆ ನಿಯಂತ್ರಣವಾಗಿದೆ. ಅತಿ ಹಿಂದುಳಿದ 39

ತಾಲ್ಲೂಕುಗಳಲ್ಲಿ ಕಳೆದ 3 ವರ್ಷಗಳಲ್ಲಿ ಹೊಸದಾಗಿ 16 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆ, 37 ಪ್ರಾಥಮಿಕ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಗಿದೆ. 4 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು 10 ಹಾಸಿಗೆ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. ತಾಯಿ ಮತ್ತು ಮಕ್ಕಳ ಆಸ್ಪತ್ರೆ ಸ್ಥಾಪನೆ / ಉನ್ನತೀಕರಣ ಮತ್ತು 7 ತಾಲ್ಲೂಕು ಆಸ್ಪತ್ರೆಗಳನ್ನು 100 ರಿಂದ 150 ಹಾಸಿಗೆಗಳ ಆಸ್ಪತ್ರೆಗಳನ್ನಾಗಿ ಉನ್ನತೀಕರಿಸಿದೆ. ಆಸ್ಪತ್ರೆ ಕಟ್ಟಡ ನಿರ್ಮಾಣ ಮತ್ತು ದುರಸ್ಥಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಧಾರವಾಡ ಜಿಲ್ಲೆಯಲ್ಲಿ ಮಾನಸಿಕ ಅಸ್ವಸ್ಥರಿಗೆ ಚಿಕಿತ್ಸೆ ನೀಡುವುದಕ್ಕೆ ಡಿಮಾನ್ಸ್ ಧಾರವಾಢ ಸಂಸ್ಥೆಯು ರಾಜ್ಯ ಸರ್ಕಾರದ ಅಧೀನದಲ್ಲಿ ಬರುವ ಒಂದು ಸ್ವಾಯತ್ತ ಸಂಸ್ಥೆಯಾಗಿರುತ್ತದೆ. ಸದರಿ ಸಂಸ್ಥೆಯನ್ನು ನಿಮ್ಹಾನ್ಸ್ ಮಾದರಿಯಲ್ಲಿ ಮೇಲ್ದರ್ಜೆಗೇರಿಸಲು ಎಂ.ಆರ್.ಐ ಯಂತ್ರವನ್ನು ಅಳವಡಿಸಲಾಗಿದೆ. ವ್ಯಸನ ಮುಕ್ತ ಘಟಕ, ಚಿಕ್ಕ ಮಕ್ಕಳ ಆರೋಗ್ಯ ವಿಭಾಗ, ನ್ಯೂರಾಲಜಿ ವಿಭಾಗದ ಹೊರರೋಗಿಗಳ ಘಟಕವನ್ನು ಪ್ರಾರಂಭಿಸಲಾಗಿದೆ. ಸಂಸ್ಥೆಯ ಆಸ್ಪತ್ರೆಯಲ್ಲಿ 100 ಹಾಸಿಗೆ ಸಾಮರ್ಥ್ಯದ ನ್ಯೂರಾಲಜಿ ಮತ್ತು ನ್ಯೂರೋ ಸರ್ಜರಿ ವಿಭಾಗದ ಕಟ್ಟಡ ನಿರ್ಮಾಣ ಕಾಮಗಾರಿಗಾಗಿ ರೂ.33.77 ಕೋಟಿಗಳ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಸಿವಿಲ್ ಕಾಮಗಾರಿಗೆ ಟೆಂಡರ್ ಪ್ರಕ್ರಿಯೇ ಚಾಲ್ತಿಯಲ್ಲಿರುತ್ತದೆ.

ಬಾಗಲಕೋಟೆ ಜಿಲ್ಲೆಯಲ್ಲಿ ''ಬಾಗಲಕೋಟೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವ ವಿದ್ಯಾಲಯ ಘಟಕ" ವೈದ್ಯಕೀಯ ಕಾಲೇಜನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಆಧಾರದ ಮೇಲೆ ಆರಂಭಿಸಲು ನಿರ್ದೇಶಿಸಲಾಗಿದೆ.

## ಶಿಕ್ಷಣ ಇಲಾಖೆ

ಶಿಕ್ಷಣ ಹಕ್ಕು ಅದಿನಿಯಮ 2009ರ ವ್ಯಾಪ್ತಿಯಲ್ಲಿ ಆವರಿಸದಿರುವ ಜನವಸತಿಗಳಿಂದ ಶಾಲೆಗಳಿಗೆ ಬರುತ್ತಿರುವ ಮಕ್ಕಳಿಗೆ, ಶಾಲೆ ಬಿಡುವುದನ್ನು ತಪ್ಪಿಸಲು ಸಾರಿಗೆ ಸೌಲಭ್ಯವನ್ನು ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದಲ್ಲಿ, ಒದಗಿಸಲಾಗಿದೆ. ಪ್ರಾಥಮಿಕ ಶಾಲೆ ಇರಬೇಕಾಗಿದ್ದು,ಅದರಂತೆ ಕ್ರಮ ವಹಿಸಲಾಗುತ್ತಿದೆ. ಸರಕಾರವು ಮಧ್ಯಾಹ್ನದ ಬಿಸಿಯೂಟ, ಸಮವಸ್ತ್ರ, ಪಠ್ಯಪುಸ್ತಕಗಳು, ಸೈಕಲ್, ಶೂಗಳು, ಕಲಿಕಾ ಸಾಮಾಗ್ರಿಗಳು ಮತ್ತು ಪ್ರೋತ್ಸಾಹಕವಾಗಿ ವಿದ್ಯಾರ್ಥಿ ವೇತನಗಳನ್ನು ಶಾಲೆಯಲ್ಲಿ ಉಳಿಸಿಕೊಳ್ಳಲು ಒದಗಿಸುತ್ತಿದೆ.

## ವೈದ್ಯಕೀಯ ಶಿಕ್ಷಣ ಇಲಾಖೆ

ರಾಜ್ಯದಲ್ಲಿ ಒಟ್ಟು 22 ಜಿಲ್ಲೆಗಳಲ್ಲಿ ಸರ್ಕಾರಿ ವೈದ್ಯಕೀಯಾ ಕಾಲೇಜುಳಿದ್ದು ಈ ಪೈಕಿ ಉತ್ತರಕರ್ನಾಟಕದ ಗದಗ, ಹಾವೇರಿ, ಕೊಪ್ಪಳ, ರಾಯಚೂರು, ಕರಾವರ, ಬಳ್ಳಾರಿ, ಯಾದಗಿರಿ ಜಿಲ್ಲೆಯಲ್ಲಿ ಸರ್ಕಾರಿ ವೈದ್ಯಕೀಯಾ ಕಾಲೇಜುಗಳನ್ನು ಸ್ಥಾಪಿಸಲಾಗಿದೆ.

ನಗರಾಭಿವೃದ್ಧಿ

ಪ್ರಾದೇಶಿಕ ಅಸಮತೋಲನ ನಿವಾರಿಸಲು ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಆರ್ಥಿಕ ಸಹಯೋಗದಿಂದ ಉತ್ತರ ಕರ್ನಾಟಕ ನಗರ ವಲಯ, ಬಂಡವಾಳ ಹೂಡಿಕೆ ಕಾರ್ಯಕ್ರಮದಡಿ 25 ನಗರ /ಪಟ್ಟಣಗಳನ್ನು ಪರಿಗಣಿಸಿದ್ದು, ಉತ್ತರ ಕರ್ನಾಟಕದ ಬೆಳಗಾವಿ ಜಿಲ್ಲೆಯ ಗೋಕಾಕ್ ನಗರದಲ್ಲಿ ಘಟಪ್ರಭಾ ನದಿಮೂಲದಿಂದ ಕುಡಿಯುವ ನೀರು ಸರಬರಾಜು ಕಾಮಗಾರಿಯನ್ನು ಹಮ್ಮಿಕೊಳ್ಳಲಾಗಿದೆ. ಇದೇ ಮಾದರಿಯಲ್ಲಿ ನಿಪ್ಪಾಣಿ ನಗರದಲ್ಲಿ, ಗದಗ ಜಿಲ್ಲೆಯ ಬೆಟಗೇರಿ ನಗರದಲ್ಲಿ, ಹಾವೇರಿ ಜಿಲ್ಲೆಯ ಹಾವೇರಿ ನಗರದಲ್ಲಿ, ರಾಯಚೂರು ಜಿಲ್ಲೆಯ ರಾಯಚೂರು ನಗರದಲ್ಲಿ, ಸಿಂಧನೂರು ನಗರದಲ್ಲಿ 2 ಪ್ಯಾಕೇಜ್‌ಗಳ ಕುಡಿಯುವ ನೀರಿನ ಸರಬರಾಜು ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದೆ. ಬೀದರ್ ಜಿಲ್ಲೆಯ ಬೀದರ್ ನಗರದಲ್ಲಿ 3 ಪ್ಯಾಕೇಜ್‌ಗಳಲ್ಲಿ ಕುಡಿಯುವ ನೀರಿನ ಸರಬರಾಜು ಕಾಮಗಾರಿಗಳನ್ನು ಹಾಗೂ ಬಸವ ಕಲ್ಯಾಣ, ರಾಣೆಬೆನ್ನೂರು, ಬ್ಯಾಡಗಿ, ಗುಲ್ಬರ್ಗಾ ನಗರ, ಹುಬ್ಬಳಿ–ಧಾರವಾಡ ನಗರ, ಬಾಗಲಕೋಟೆ ಜಿಲ್ಲೆಯ ಇಳಕಲ್ ಪಟ್ಟಣ, ಯಾದಗಿರಿ, ನಗರದಲ್ಲೂ ಸಹ ಕುಡಿಯುವ ನೀರಿನ ಸರಬರಾಜು ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಬಳ್ಳಾರಿ ಜಿಲ್ಲೆಯ ಬಳ್ಳಾರಿ ನಗರದಲ್ಲಿ 4 ಪ್ಯಾಕೇಜ್‌ಗಳ ಕುಡಿಯುವ ನೀರಿನ ಸರಬರಾಜು ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದೆ.

ಜಲಶುದ್ದಿ ಅಭಿಯಾನವನ್ನು ಉತ್ತರ ಕರ್ನಾಟಕದ ಗದಗ, ಬೆಳಗಾವಿ, ಹಾವೇರಿ, ಧಾರವಾಡ, ಕಲಬುರಗಿ ಜಿಲ್ಲೆಗಳಲ್ಲಿ ಕೈಗೊಳ್ಳಲಾಗುತ್ತಿದೆ.

ಜಲಶುದ್ದಿ ಅಭಿಯಾನದಡಿ ಮಲತ್ಯಾಜ್ಯ ಸಂಸ್ಕರಣಾ ಘಟಕಗಳ ಕಾಮಗಾರಿಯನ್ನು ಉತ್ತರ ಕರ್ನಾಟಕದ ಕಲಬುರಗಿ, ರಾಯಚೂರು, ವಿಜಯನಗರ, ಬೀದರ್, ಬಳ್ಳಾರಿ, ಗದಗ, ವಿಜಯಪುರ, ಬೆಳಗಾವಿ, ಬಾಗಲಕೋಟೆ ಜಿಲ್ಲೆಗಳಲ್ಲಿ ಕೈಗೊಳ್ಳಲಾಗುತ್ತಿದೆ.

ಉತ್ತರ ಕರ್ನಾಟಕದಲ್ಲಿ ಬೆಳಗಾವಿ, ಧಾರವಾಢ, ಬಿಜಾಪುರ, ಗದಗ, ಹಾವೇರಿ, ಬೀದರ್ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಆಧ್ಯತೆಯ ಮೇರೆಗೆ ಕುಡಿಯುವ ನೀರು ಸರಬರಾಜು ವ್ಯವಸ್ಥೆಯನ್ನು ಕಲ್ಪಿಸಲು ಕ್ರಮವಹಿಸಲಾಗಿದೆ.

KUIDFC (Karnataka Urban Infrastructure development in finance corporation) ನಿಗಮದಿಂದ ಉತ್ತರ ಕರ್ನಾಟಕದ ಕಲಬುರ್ಗಿ, ಗದಗ, ಬಾಗಲಕೋಟೆ ಜಿಲ್ಲೆಗಳಲ್ಲಿ ಅಮೃತ್ ಯೋಜನೆಯಡಿಯಲ್ಲಿ ಒಳಚರಂಡಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಇದುವರೆಗೆ ಉತ್ತರ ಕರ್ನಾಟಕದಲ್ಲಿನ 103 ನಗರ/ಪಟ್ಟಣಗಳ ಪೈಕಿ 32 ನಗರ/ಪಟ್ಟಣಗಳಲ್ಲಿ ಒಳಚರಂಡಿ ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ.

## ವಾಣಿಜ್ಯ ಮತ್ತು ಕೈಗಾರಿಕೆ

ಡಾ.ನಂಜುಂಡಪ್ಪ ನವರ ವರದಿಯಂತೆ ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಕೈಗಾರಿಕಾ ವಿಕಾಸ ಯೋಜನೆಯನ್ನು ಅನುಷ್ಠಾನಿಸುತ್ತಿದೆ. ಹಿಂದುಳಿದ ತಾಲ್ಲೂಕುಗಳನ್ನು ಮುಖ್ಯವಾಗಿ ಕೈಗಾರಿಕಾ ಮೂಲಸೌಲಭ್ಯಗಳು, ಹೊಸ ಕೈಗಾರಿಕಾ ವಸಾಹತು, ಹೊಸ ಕೈಗಾರಿಕಾ ಪ್ರದೇಶಗಳನ್ನು ಒದಗಿಸುವುದಲ್ಲದೇ ಅಗತ್ಯವಿರುವ ಕಾರ್ಯಕ್ರಮಗಳನ್ನು ನೀಡುವುದು ಈ ಯೋಜನೆಯ ಉದ್ದೇಶವಾಗಿದೆ.

## ಮೂಲ ಸೌಲಭ್ಯ ಅಭಿವೃದ್ಧಿ

ಪ್ರಸ್ತುತ ರಾಜ್ಯದಲ್ಲಿ 9 ವಿಮಾಣ ನಿಲ್ದಾಣಗಳಿದ್ದು, ಈ ಪೈಕಿ 5 ವಿಮಾನ ನಿಲ್ದಾಣಗಳು ಉತ್ತರ ಕರ್ನಾಟಕದ ಕಲಬುರ್ಗಿ, ಹುಬ್ಬಳಿ, ಬೀದರ್, ವಿಜಯಪುರ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದೆ. ರಾಯಚೂರು ವಿಮಾಣ ನಿಲ್ದಾಣ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.

ಬೀದರ್ ಗುಲ್ಬರ್ಗಾ, ಬಾಗಲಕೋಟೆ, ಬೆಳಗಾವಿ, ಹಾವೇರಿ, ಬಳ್ಳಾರಿ, ಕೊಪ್ಪಳ, ಗದಗ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಹೊಸ ರೈಲು ಮಾರ್ಗ ಯೋಜನೆಗೆ ಅನುದಾನ ಹಂಚಿಕೆ ಮಾಡಲಾಗಿದೆ.

ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ, KRIDE ಮೇಲುಸೇತುವೆ/ಕೆಳಸೇತುವೆ ಯೋಜನೆಗಳಿಗೆ ಅನುದಾನ ಹಂಚಿಕೆ ಮಾಡಲಾಗಿದೆ.

## ಪ್ರವಾಸೋದ್ಯಮ

ಬೆಳಗಾವಿ, ಉತ್ತರ ಕನ್ನಡ, ಗದಗ, ಧಾರವಾಡ, ಹಾವೇರಿ, ಬಾಗಲಕೋಟೆ, ವಿಜಯಪುರ, ಕಲಬುರ್ಗಿ, ರಾಯಚೂರು, ಬೀದರ್, ಯಾದಗಿರಿ, ಬಳ್ಳಾರಿ ಮತ್ತು ಕೊಪ್ಪಳ ತಾಲ್ಲೂಕುಗಳಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಮೂಲಭೂತ ಸೌಕರ್ಯಗಳಿಗೆ ವಿಶೇಷ ಅಭಿವೃದ್ಧಿ ಯೋಜನೆಯಡಿ ಅನುದಾನ ಒದಗಿಸಲಾಗಿದೆ.

## ಲೋಕೋಪಯೋಗಿ

ಧಾರವಾಡ, ಗದಗ, ಬೆಳಗಾವಿ, ಧಾರವಾಡ, ಹಾವೇರಿ, ಉತ್ತರಕನ್ನಡ, ವಿಜಯಪುರ, ಬಾಗಲಕೋಟೆ ಸಾಮಾನ್ಯ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ಕಾಂಕ್ರಿಟ್ ರಸ್ತೆ, ಚರಂಡಿ ಕಾಮಗಾರಿಗಳಿಗೆ, ಸಿ.ಸಿ. ರಸ್ತೆ, ಡಾಂಬರಿಕರಣ ಮಾಡಿ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು ರಾಜ್ಯ ಹೆದ್ದಾರಿಯ ರಸ್ತೆ, ಜಿಲ್ಲಾ ಮತ್ತ ಇತರೆ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ವಿಶೇಷ ಅಭಿವೃದ್ಧಿ ಯೋಜನೆಯಡಿ ಅನುದಾನ ಒದಗಿಸಲಾಗಿದೆ.

ಸಾರಿಗೆ

ಉತ್ತರ ಕರ್ನಾಟಕದ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಲ್ಲಿ ಬಸ್ ನಿಲ್ದಾಣ ಇಲ್ಲದೆ ಇರುವ ಸ್ಥಳಗಳಲ್ಲಿ ಬಸ್ ನಿಲ್ದಾಣ ನಿರ್ಮಿಸುವುದು, ಇರುವಂತಹ ಬಸ್ ನಿಲ್ದಾಣಗಳು ಹಾಳಾಗಿದ್ದಲ್ಲಿ ನವೀಕರಿಸಲು, ಬಸ್ ನಿಲ್ದಾಣದ ಆವರಣ ಗೋಡೆ ಮತ್ತು ಕಾಂಕ್ರೀಟ್ ರಸ್ತೆ ನಿರ್ಮಿಸುವುದು, ಬಸ್ ನಿಲ್ದಾಣದಲ್ಲಿ ನಿರ್ಮಲ ಮಾದರಿಯ ಶೌಚಲಾಯ ವ್ಯವಸ್ಥೆ ಮತ್ತು ಮಹಿಳೆಯರಿಗೆ ವಿಶ್ರಾಂತಿ ಕೊಠಡಿ ನಿರ್ಮಿಸವುದು ಮತ್ತು ಬಸ್ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಲು ವಿಶೇಷ ಅಭಿವೃದ್ಧಿ ಯೋಜನೆಯಡಿ ಅನುದಾನ ಒದಗಿಸಲಾಗಿದೆ.

ಇಂಧನ ಇಲಾಖೆ

ರಾಜ್ಯದ ಉತ್ತರಕರ್ನಾಟಕದಲ್ಲಿ ಹುಬ್ಬಳಿವಿದ್ಯುತ್ ಸರಬರಾಜು ಕಂಪನಿ ಮತ್ತು ಗುಲ್ಬಾರ್ಗ ವಿದ್ಯುತ್ ಸರಬರಾಜು ಕಂಪನಿ ಸ್ಥಾಪಿಸಿ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

## ಕರ್ನಾಟಕ ವಿಧಾನ ಪರಿಷತ್ತು

### ಶ್ರೀ ನಿರಾಣಿ ಹಣಮಂತ ರುದ್ರಪ್ಪ, ಮಾನ್ಯ ವಿಧಾನ ಪರಿಷತ್ ಸದಸ್ಯರು ನಿಯಮ 330 ರಡಿ ಗಮನ ಸೆಳೆಯುವ ಸೂಚನೆ ಸಂಖ್ಯೆ:5ಕ್ಕೆ ಉತ್ತರಿಸುವ ಕುರಿತು.

* * * * *

ಪ್ರಶ್ನೆ

ಉತ್ತರ ಕರ್ನಾಟಕ ಸಮಗ್ರ ಅಭಿವೃದ್ಧಿ ಕುರಿತು ಮತ್ತು ಆ ಭಾಗದ ಪ್ರದೇಶಕ್ಕೆ ಅಸಮತೋಲನ ನಿವಾರಣೆಗೆ ಮಾರ್ಗೋಪಾಯಗಳನ್ನು ಕಂಡುಕೊಳ್ಳಲು ಸುಧೀರ್ಘ ಚರ್ಚೆಗೆ ಅವಕಾಶ ನೀಡುವ ಕುರಿತು, ಈ ಭಾಗದ ನೀರಾವರಿ ಯೋಜನೆಗಳ ಅನುಷ್ಠಾನ, ಕೈಗಾರಿಕೆಗಳ ಸ್ಥಾಪನೆ, ಲಕ್ಷಾಂತರ ಯುವಕರಿಗೆ ಉದ್ಯೋಗ ಸೃಷ್ಟಿಗಾಗಿ ಇರುವ ಅವಕಾಶಗಳು, ಶಿಥಿಲಾವ್ಯಸ್ಥೆಯಲ್ಲಿರುವ ಕನ್ನಡ ಶಾಲೆಗಳು ಪುನರ್ ನಿರ್ಮಾಣ, ವಿವಿಧ ಇಲಾಖೆಗಳಲ್ಲಿ ಇರುವ ಖಾಲಿ ಹುದ್ದೆಗಳ ನೇಮಕಾತಿ, ಮೂಲಭೂತ ಸೌಕರ್ಯ, ಪ್ರವಾಸೋಧ್ಯಮಕ್ಕೆ ಉತ್ತೇಜನೆ, ಮಣ್ಣು & ನೀರಿನ ಸಂರಕ್ಷಣೆ, ಹೀಗೆ ಉತ್ತರ ಕರ್ನಾಟಕ ಭಾಗವು ಎದುರಿಸುತ್ತಿರುವ ಹಲವಾರು ಜಲಂತ ಸಮಸ್ಯೆಗಳ ಕುರಿತು ನಿಯಮ 330ರಡಿಯಲ್ಲಿ ಪ್ರಸ್ತಾಪಿಸಬಯಸುತ್ತೇನೆ.

**ಉತ್ತರ:**

ಸಣ್ಣ ನೀರಾವರಿ ಇಲಾಖೆಯಡಿ ವಲಯ ಮಟ್ಟದ ಕಚೇರಿಯು ವಿಜಯಪುರ ಜಿಲ್ಲಾ ಕೇಂದ್ರ ಸ್ಥಾನದಲ್ಲಿ, ವೃತ್ತ ಕಚೇರಿಗಳು ಬೆಳಗಾವಿ ಹಾಗೂ ಕಲಬುರಗಿ ಕಂದಾಯ ವಿಭಾಗ ಪ್ರದೇಶದಲ್ಲಿ ಹಾಗೂ ಬೆಳಗಾವಿ, ಧಾರವಾಡ, ಹಳಿಯಾಳ, ವಿಜಯಪುರ, ಕಲಬುರಗಿ, ಬೀದರ, ಬಳ್ಳಾರಿ ಮತ್ತು ಕೊಪ್ಪಳದಲ್ಲಿ ವಿಭಾಗ ಕಚೇರಿಗಳು ಕಾರ್ಯ ನಿರ್ವಹಿಸುತ್ತಿವೆ. ಅಲ್ಲದೆ, ಸದರಿ ವಿಭಾಗ ವ್ಯಾಪ್ತಿಯಲ್ಲಿ ವಿವಿಧ ತಾಲ್ಲೂಕು ಕೇಂದ್ರಗಳಲ್ಲಿ ಉಪ ವಿಭಾಗ ಕಚೇರಿಗಳು ಕಾರ್ಯ ನಿರ್ವಹಿಸುತ್ತಿವೆ.

ಸಣ್ಣ ನೀರಾವರಿ ಇಲಾಖೆಯಿಂದ 40 ಹೆಕ್ಟೇರ್ ದಿಂದ 2000 ಹೆಕ್ಟೇರ್ ವರೆಗೆ ಕೃಷಿ ಜಮೀನಿಗೆ ಪರೋಕ್ಷವಾಗಿ/ಅಪರೋಕ್ಷವಾಗಿ ನೀರಾವರಿ ಸೌಲಭ್ಯ ಕಲ್ಪಿಸುವಂತಹ ಸಣ್ಣ ನೀರಾವರಿ ಯೋಜನೆಗಳಾದ ನೀರಾವರಿ ಕೆರೆಗಳು, ಜಿನುಗು ಕೆರೆಗಳು, ಅಣೆಕಟ್ಟು, ಪಿಕಪ್, ಬಂದಾರ, ಚೆಕ್ ಡ್ಯಾಂ, ಬ್ರಿಡ್ಜ್ ಕಂ ಬ್ಯಾರೇಜ್, ಕಿಂಡಿ ಅಣೆಕಟ್ಟು, ಉಪ್ಪು ನೀರು ಕೃಷಿ ಭೂಮಿಗೆ ನುಗ್ಗುವುದನ್ನು ತಡೆಗಟ್ಟಲು ಕ್ಷಾರ ಭೂಮಿ ಯೋಜನೆಗಳು, ಏತ ನೀರಾವರಿ ಯೋಜನೆಗಳಂತಹ ಸಣ್ಣ ನೀರಾವರಿ ಯೋಜನೆಗಳನ್ನು ಪ್ರತಿ ವರ್ಷ ಇಲಾಖೆಗೆ ಒದಗಿಸಲಾಗುವ ಅನುದಾನ ಹಾಗೂ ಸದರಿ ಯೋಜನೆಗಳ ತಾಂತ್ರಿಕ ಹಾಗೂ ಆರ್ಥಿಕ ಕಾರ್ಯಸಾಧ್ಯತೆಯ ಆಧಾರದ ಮೇಲೆ ಕೈಗೊಳ್ಳಲಾಗುತ್ತಿದೆ. ಅಲ್ಲದೆ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದ ರೈತರ ಕೃಷಿ ಭೂಮಿಗೆ ಕೊಳವೆ ಬಾವಿ ಮೂಲಕ ಏತ ನೀರಾವರಿ ಯೋಜನೆಗಳ ಮೂಲಕ ಹಾಗೂ ಚೆಕ್ ಡ್ಯಾಂ ಗಳ ಮೂಲಕ ನೀರಾವರಿ ಸೌಲಭ್ಯ ಕಲ್ಪಿಸುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಪ್ರಸ್ತುತ ವರ್ಷ ಸಣ್ಣ ನೀರಾವರಿ ಉತ್ತರ ವಲಯಕ್ಕೆ ವಿವಿಧ ಲೆಕ್ಕಶೀರ್ಷಿಕೆ ಗಳಡಿ 764.52 ಕೋಟಿ ರೂ.ಗಳ ಅನುದಾನ ಹಂಚಿಕೆ ಮಾಡಲಾಗಿದೆ ಹಾಗೂ 10289 ಹೆಕ್ಟೇರ್ ನೀರಾವರಿ ಪ್ರದೇಶವನ್ನು ಸೃಜಿಸಲು ಯೋಜಿಸಲಾಗಿದೆ.

ಪ್ರಸ್ತುತ ವರ್ಷ ಈ ಕೆಳಕಂಡ ಸಣ್ಣ ನೀರಾವರಿ ಯೋಜನೆಗಳನ್ನು ಕೈಗೊಳ್ಳಲು ಅನುಮೋದನೆ ನೀಡಲಾಗಿರುತ್ತದೆ.

| ಕ್ರ. ಸಂ. | ಲೆಕ್ಕಶೀರ್ಷಿ | ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ (ರೂ.ಕೋಟಿಗಳಲ್ಲಿ) |
|---|---|---|---|
| 1 | 4702-ಪ್ರಧಾನ ಕಾಮಗಾರಿಗಳು, ಹೊಸ ಕೆರೆಗಳು | 4 | 12.55 |
| 2 | 4702-ಪ್ರಧಾನ ಕಾಮಗಾರಿಗಳು, ಕೆರೆಗಳ ಆಧುನೀಕರಣ | 63 | 149.28 |

**ಕರ್ನಾಟಕ ಸರ್ಕಾರ**

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಡತ ಸಂಖ್ಯೆ: MID/100/LCQ/2025

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ, 2ನೇ ಮಹಡಿ
ಬೆಂಗಳೂರು, ದಿನಾಂಕ:26.11.2025.

**<u>ಅನಧಿಕೃತ ಟಿಪ್ಪಣಿ</u>**

**ವಿಷಯ:** ಶ್ರೀ ನಿರಾಣಿ ಹಣಮಂತ ರುದ್ರಪ್ಪ ಮಾನ್ಯ ವಿಧಾನ ಪರಿಷತ್ ಸದಸ್ಯರು ನಿಯಮ 330 ರಡಿ ಗಮನ ಸೆಳೆಯುವ ಸೂಚನೆ ಸಂಖ್ಯೆ:5ಕ್ಕೆ ಉತ್ತರಿಸುವ ಕುರಿತು.

**ಉಲ್ಲೇಖ:** <u>ನಿರ್ದೇಶಕರು, ಎಡಿಬಿ ವಿಭಾಗ, ಯೋಜನೆ, ಕಾರ್ಯಕ್ರಮ ಸಂಯೋಜನೆ ಹಾಗೂ ಸಾಂಖ್ಯಿಕ ಇಲಾಖೆ.</u>

* * * * *

ಶ್ರೀ ನಿರಾಣಿ ಹಣಮಂತ ರುದ್ರಪ್ಪ ಮಾನ್ಯ ವಿಧಾನ ಪರಿಷತ್ ಸದಸ್ಯರು ನಿಯಮ 330 ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ:5ಕ್ಕೆ ಸಂಬಂಧಿಸಿದಂತೆ ಸಣ್ಣ ನೀರಾವರಿ ಇಲಾಖೆಯ ಮಾಹಿತಿಯನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಈ ಮೂಲಕ ಕಳುಹಿಸಲಾಗಿದೆ.

Y.N. 26/11/2025

(ವೀಣಾ ವೈ. ಎನ್.)
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

**ಇವರಿಗೆ**
ನಿರ್ದೇಶಕರು,
ಎಡಿಬಿ ವಿಭಾಗ,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಹಾಗೂ ಸಾಂಖ್ಯಿಕ ಇಲಾಖೆ,
ಬಹುಮಹಡಿ ಕಟ್ಟಡ
ಬೆಂಗಳೂರು

| | | | |
|---|---|---|---|
| 3 | 4702-ಪ್ರಧಾನ ಕಾಮಗಾರಿಗಳು, ಅಣೆಕಟ್ಟು, ಪಿಕಪ್, ಬಂದಾರ | 169 | 453.47 |
| 4 | 4702-ಪ್ರಧಾನ ಕಾಮಗಾರಿಗಳು, ಪಶ್ಚಿಮ ವಾಹಿನಿ ಯೋಜನೆ | 23 | 44.65 |
| 5 | 4702-ಪ್ರಧಾನ ಕಾಮಗಾರಿಗಳು, ಏತ ನೀರಾವರಿ ಯೋಜನೆ | 50 | 520.05 |
| 6 | 4711-ಪ್ರವಾಹ ನಿಯಂತ್ರಣ ಕಾಮಗಾರಿಗಳು | 10 | 13.69 |
| 7 | ವಿಶೇಷ ಘಟಕ ಯೋಜನೆ | 2103 | 269.78 |
| 8 | ಗಿರಿಜನ ಉಪ ಯೋಜನೆ | 1651 | 239.65 |
| 9 | ಕೇಂದ್ರ ಪುರಸ್ಕೃತ ಯೋಜನೆ (PMKSY-HKKP-SMI) | 50 | 76.35 |
| | ಒಟ್ಟು | 4123 | 1779.47 |

ಕಡತ ಸಂಖ್ಯೆ: MID/100/LCQ/2025